ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

ಸಂಪುಟ : 3 । ಸಂಚಿಕೆ : 1 | ಫೆಬ್ರವರಿ : 2021 | ಪುಟಗಳು : 20 । ಬೆಲೆ : 25/–



## ಈ ವರ್ಷ ಕಾಗದ ರಹಿತ ಬಜೆಟ್ ಮಂಡನೆ : ಮೊಬೈಲ್ ಆಪ್ ಬಿಡುಗಡೆ ಮಾಡಿದ ನಿರ್ಮಲಾ ಸೀತಾರಾಮನ್









## ಸಹಕಾರ ಇಲಾಖೆಯಲ್ಲಿ ಖಾಲಿ ಇರುವ 5 ಸಾವಿರ ವಿವಿಧ ಹುದ್ದೆಗಳ ಭರ್ತಿ

## ಸಹಕಾರ ಸಚಿವ ಎಸ್.ಟಿ. ಸೋಮಶೇಖರ್



ಬೆಳ್ಳಿ ಪ್ರಕಾಶ್
ಅಧ್ಯಕ್ಷರು




## ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಶಾಸಕ ಬೆಳ್ಳಿ ಪ್ರಕಾಶ್, ಉಪಾಧ್ಯಕ್ಷರಾಗಿ ಜಿ.ಡಿ. ಹರೀಶ್‌ಗೌಡ ಆಯ್ಕೆ



ಜಿ.ಡಿ. ಹರೀಶ್‌ಗೌಡ
ಉಪಾಧ್ಯಕ್ಷರು

# ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಶಾಸಕ ಬೆಳ್ಳಿ ಪ್ರಕಾಶ್, ಉಪಾಧ್ಯಕ್ಷರಾಗಿ ಜಿ.ಡಿ.ಹರೀಶ್‌ಗೌಡ ಆಯ್ಕೆ



ಬೆಳ್ಳಿ ಪ್ರಕಾಶ್
ಅಧ್ಯಕ್ಷರು

**ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿ ಪದಾಧಿಕಾರಿಗಳ ಚುನಾವಣೆ ದಿನಾಂಕ : 5.1.2021 ರಂದು ನಡೆದು ಬ್ಯಾಂಕಿನ ಅಧ್ಯಕ್ಷರಾಗಿ ಶಾಸಕರು ಹಾಗೂ ಚಿಕ್ಕಮಗಳೂರು ಡಿಸಿಸಿ ಬ್ಯಾಂಕಿನ ನಿರ್ದೇಶಕರಾದ ಬೆಳ್ಳಿ ಪ್ರಕಾಶ್‌ರವರು, ಉಪಾಧ್ಯಕ್ಷರಾಗಿ ಮೈಸೂರು – ಚಾಮರಾಜನಗರ ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾದ ಜಿ.ಡಿ. ಹರೀಶ್‌ಗೌಡ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.**



ಜಿ.ಡಿ. ಹರೀಶ್‌ಗೌಡ
ಉಪಾಧ್ಯಕ್ಷರು

**ಚಿಕ್ಕಮಗಳೂರು ಜಿಲ್ಲೆಯ ಸಹಕಾರ ಕ್ಷೇತ್ರದ ಬಲವರ್ಧನೆಗೆ ಸಹಕಾರಿಗಳು, ಶಾಸಕರೂ ಆದ ಬೆಳ್ಳಿ ಪ್ರಕಾಶ್ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಬಿಇ, ಎಲ್.ಎಲ್.ಬಿ. ಪದವೀಧರರಾಗಿರುವ ಬೆಳ್ಳಿ ಪ್ರಕಾಶ್ ಅವರು ಸಹಕಾರ ಕ್ಷೇತ್ರ, ಸಾಮಾಜಿಕ, ರಾಜಕೀಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ.**

ಕಡೂರು ತಾಲ್ಲೂಕು ಸಿಂಗಟಗೆರೆ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷರಾಗಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ, ಎರಡು ಅವಧಿಗೆ ಚಿಕ್ಕಮಗಳೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿರುವ ಶ್ರೀಯುತರು, ದಿನಾಂಕ: 5.1.2021 ರಂದು ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕೃಷಿಕರ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದ್ದಾರೆ. ಪ್ರಸ್ತುತ ಕಡೂರು ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಸೇವೆ ಸಲ್ಲಿಸುತ್ತಿರುವ ಬೆಳ್ಳಿ ಪ್ರಕಾಶ್ ಅವರು ಮೂಲಭೂತ ಸೌಕರ್ಯಗಳ ಅಭಿವೃದ್ಧಿಗಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಇದಕ್ಕೂ ಮೊದಲು ಜಿಲ್ಲಾ ಪಂಚಾಯ್ತಿ ಸದಸ್ಯರಾಗಿ ಆಯ್ಕೆಯಾಗಿ ನಂತರ ಜಿಲ್ಲಾ ಪಂಚಾಯ್ತಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಅಪಾರ ಅನುಭವ ಗಳಿಸಿದ್ದಾರೆ.

ಬೆಂಗಳೂರಿನ ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ, ಕಡೂರಿನ ಸಾಯಿಬಾಬಾ ಟ್ರಸ್ಟ್ ಅಧ್ಯಕ್ಷರಾಗಿಯೂ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

**ರಾಜ್ಯ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಮೈಸೂರು ಜಿಲ್ಲಾ ಸಹಕಾರ ಬ್ಯಾಂಕಿನ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅತಿ ಕಿರಿಯ ವಯಸ್ಸಿನಲ್ಲೇ ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗಿ ಆಯ್ಕೆಯಾದ ಹೆಗ್ಗಳಿಕೆಗೆ ಹರೀಶ್‌ಗೌಡರು ಪಾತ್ರರಾಗಿದ್ದಾರೆ.**


ಹರೀಶ್‌ಗೌಡ ಅವರು ಅಪೆಕ್ಸ್ ಬ್ಯಾಂಕಿನ ಉಪಾಧ್ಯಕ್ಷರಾಗುವ ಮೂಲಕ ರಾಜ್ಯ ಸಹಕಾರಿ ಕ್ಷೇತ್ರಕ್ಕೆ ಯುವ, ಉತ್ಸಾಹಿ ತರುಣನೊಬ್ಬ ಸಿಕ್ಕಂತಾಗಿದೆ. ಸಹಕಾರಿ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿ, ಸಹಕಾರಿ ಧುರೀಣರೆಂದೇ ಪ್ರಖ್ಯಾತಿ ಪಡೆದಿರುವ ಶಾಸಕರೂ ಆದ ಮಾಜಿ ಸಚಿವ ಜಿ.ಟಿ. ದೇವೇಗೌಡರು ಹಾಗೂ ರಾಜ್ಯ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಕೆ. ಲಲಿತ ಜಿ.ಟಿ. ದೇವೇಗೌಡರ ಸುಪುತ್ರರಾದ ಜಿ.ಡಿ. ಹರೀಶ್‌ಗೌಡರು ತಂದೆ–ತಾಯಿಯರಂತೆ ಸಹಕಾರಿ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸುತ್ತಾ ದಾಪುಗಾಲಿಟ್ಟಿದ್ದಾರೆ. ಮೈಸೂರಿನ ಎನ್‌ಐಇ ಕಾಲೇಜಿನ ಇಂಜಿನಿಯರಿಂಗ್ ಪದವೀಧರರಾಗಿ ನಂತರ ಲಂಡನ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಹರೀಶ್‌ಗೌಡ ಅವರು, 2010 ರಲ್ಲಿ ತಮ್ಮ ತಾಯಿ ಕೆ. ಲಲಿತಾ ದೇವೇಗೌಡರು ಹುಣಸೂರು ತಾಲ್ಲೂಕು ಹನಗೋಡು ಜಿ.ಪಂ. ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ವೇಳೆ ಲಂಡನ್ನಿನಿಂದ ಆಗಮಿಸಿ ತಾಯಿಯವರ ಚುನಾವಣಾ ಪ್ರಚಾರ ಕಾರ್ಯದಲ್ಲಿ ಭಾಗವಹಿಸುವ ಮೂಲಕ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. 2012ರಲ್ಲಿ ಹುಣಸೂರು ಕಸಬಾ ವ್ಯವಸಾಯೋತ್ಪನ್ನ ಸಹಕಾರ ಸಂಘದ ನಿರ್ದೇಶಕರಾಗುವ ಮೂಲಕ ಸಹಕಾರಿ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿದರು. 2013ರಲ್ಲಿ ಡಿಸಿಸಿ ಬ್ಯಾಂಕಿನ ನಿರ್ದೇಶಕರಾಗುವ ಮೂಲಕ ಅತಿ ಕಿರಿಯ ವಯಸ್ಸಿನಲ್ಲಿ (26 ವರ್ಷ) ನಿರ್ದೇಶಕರಾದ ಹೆಗ್ಗಳಿಕೆಗೆ ಪಾತ್ರರಾದರು. 2018ರಲ್ಲಿ ಎರಡನೇ ಬಾರಿ ಕಸಬಾ ಸಂಘದ ನಿರ್ದೇಶಕರಾಗಿ 31ನೇ ವಯಸ್ಸಿಗೆ ಡಿಸಿಸಿ ಬ್ಯಾಂಕಿನ ಅಧ್ಯಕ್ಷಗಾದಿಗೇರಿದ್ದರು. ಇದೀಗ ರಾಜ್ಯ ಅಪೆಕ್ಸ್ ಬ್ಯಾಂಕಿನಲ್ಲಿ ಮೊದಲ ಬಾರಿಗೆ ನಿರ್ದೇಶಕರಾಗಿ ಕೂಡಲೇ ಉಪಾಧ್ಯಕ್ಷ ಹುದ್ದೆಯನ್ನೂ ಅತ್ಯಂತ ಕಿರಿಯ ವಯಸ್ಸಿನಲ್ಲೇ ಮುಡಿಗೇರಿಸಿಕೊಂಡು ಸಾಧನೆ ಮೆರೆದಿದ್ದಾರೆ.

ಇದಲ್ಲದೆ ಹುಣಸೂರಿನ ಟಿಎಪಿಸಿಎಂಎಸ್ ಹಾಗೂ ಮೈಸೂರಿನ ಜನತಾ ಬಜಾರ್‌ನ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದು, ಮೈಮುಲ್, ಕೆಎಂಎಫ್ ಪ್ಯಾಕ್ಸ್ ಸೊಸೈಟಿಗಳ ನೇತೃತ್ವ ವಹಿಸಿ ತಮ್ಮ ಮಾರ್ಗದರ್ಶನ ನೀಡುತ್ತಿದ್ದಾರೆ.

# ಶಾಂತಿಗೆ ಬದ್ಧ – ಅಪಾಯ ಎದುರಿಸಲು ಸನ್ನದ್ಧ : ರಾಷ್ಟ್ರಪತಿ ರಾಮನಾಥ್ ಕೋವಿಂದ್

**ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದ್ದು**

- ಸಂವಿಧಾನವು ಉಲ್ಲೇಖಿಸಿರುವ ಭ್ರಾತೃತ್ವದ ಭಾವವು ದೇಶದಲ್ಲಿ ಜೀವಂತವಾಗಿಲ್ಲದಿದ್ದರೆ ಕೋವಿಡ್ ಪಿಡುಗನ್ನು ಪರಿಣಾಮಕಾರಿಯಾಗಿ ಎದುರಿಸಲು ಸಾಧ್ಯವಾಗುತ್ತಿರಲಿಲ್ಲ.
- ಕೋವಿಡ್ ಅಗ್ನಿಪರೀಕ್ಷೆಯನ್ನು ಎದುರಿಸುವಲ್ಲಿ ಭಾರತವು ನಿರಾಸೆಯನ್ನು ದೂರಮಾಡಿ ಆತ್ಮವಿಶ್ವಾಸದಿಂದ ನಿಂತಿದೆ.
- ಪ್ರತಿಕೂಲ ಸ್ಥಿತಿಗಳು ಪಾಠಗಳನ್ನು ಕಲಿಸುವ ಮೂಲಕ ನಮ್ಮನ್ನು ಬಲಶಾಲಿಯಾಗಿಸಿ, ಆತ್ಮವಿಶ್ವಾಸ ಮೂಡಿಸುತ್ತವೆ. ಇಂಥ ಪ್ರತಿಕೂಲಗಳನ್ನು ಎದುರಿಸಿ ಭಾರತ ಹಲವು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ.



**ನವದೆಹಲಿ :** 'ಭಾರತವು ಶಾಂತಿಗೆ ಬದ್ಧವಾಗಿದೆ. ಆದರೆ, ದೇಶದ ಭದ್ರತೆಗೆ ಎದುರಾಗುವ ಯಾವುದೇ ಅಪಾಯವನ್ನು ಎದುರಿಸಲು ನಮ್ಮ ಸೇನಾ ಪಡೆಗಳು ಸನ್ನದ್ಧವಾಗಿವೆ' ಎಂದು ರಾಷ್ಟ್ರಪತಿ ರಾಮನಾಥ ಕೋವಿಂದ್ ಹೇಳಿದರು.

72ನೇ ಗಣರಾಜ್ಯೋತ್ಸವದ ಮುನ್ನಾದಿನದ ತಮ್ಮ ಭಾಷಣದಲ್ಲಿ, ಚೀನಾದ ವಿಸ್ತರಣಾವಾದಕ್ಕೆ ಉತ್ತರವೆಂಬಂತೆ ಮಾತನಾಡಿದ ಅವರು, 'ಯಾವುದೇ ಬೆಲೆ ತೆತ್ತಾದರೂ ರಾಷ್ಟ್ರದ ಹಿತಾಸಕ್ತಿಯನ್ನು ಕಾಪಾಡಲಾಗುವುದು. ಕಳೆದ ವರ್ಷ ನಾವು ಗಡಿಯಲ್ಲಿ ವಿಸ್ತರಣಾ ವಾದದ ಸವಾಲನ್ನು ಎದುರಿಸಿದೆವು. ನಮ್ಮ ವೀರ ಯೋಧರು, ವಿರೋಧಿಗಳ ಉದ್ದೇಶವನ್ನು ವಿಫಲಗೊಳಿಸಿದರು. ಅವರಲ್ಲಿ 20 ಯೋಧರು ಹುತಾತ್ಮರಾದರು. ಭಾರತದ ಯೋಧರ ತ್ಯಾಗಕ್ಕೆ ರಾಷ್ಟ್ರವು ಋಣಿಯಾಗಿರುತ್ತದೆ' ಎಂದರು. 'ಭಾರತ – ಚೀನಾ ಗಡಿಯಲ್ಲಿ ಒಂಬತ್ತು ತಿಂಗಳುಗಳಿಂದ ಉದ್ವಿಗ್ನತೆ ಇದೆ. ಮೈನಸ್ 50ರಿಂದ 60ಡಿಗ್ರಿ ಸೆಲ್ಸಿಯಸ್ ತಾಪಮಾನದ ಗಾಲ್ವನ್ ಕಣಿವೆ ಯಿಂದ, ಜೈಸಲ್ಮೇರ್‌ನ 50ಡಿಗ್ರಿ ಸೆಲ್ಸಿಯಸ್‌ನ ಸುಡುಬಿಸಿಲಿನ ಪ್ರದೇಶದವರೆಗೆ, ಭೂಮಿ, ಆಕಾಶ ಹಾಗೂ ವಿಸ್ತಾರ ವಾದ ಕರಾವಳಿಯುದ್ದಕ್ಕೂ ನಮ್ಮ ಸೈನಿಕರು ಎಚ್ಚರದಿಂದಿದ್ದಾರೆ. ಅವರ ತ್ಯಾಗ, ದೇಶಭಕ್ತಿಯ ಬಗ್ಗೆ ಪ್ರತಿ ಭಾರತೀಯನಿಗೂ ಹೆಮ್ಮೆ ಇದೆ' ಎಂದರು.

ಕೃಷಿ ಕಾಯ್ದೆಗಳ ರದ್ದತಿಗೆ ಒತ್ತಾಯಿಸಿ ನಡೆಯುತ್ತಿರುವ ರೈತರ ಪ್ರತಿಭಟನೆಯನ್ನು ಉಲ್ಲೇಖಿಸಿ, 'ಮೂರು ಕೃಷಿ ಕಾಯ್ದೆಗಳ ಬಗ್ಗೆ ರೈತರು ಭಯಪಡುವ ಅಗತ್ಯವಿಲ್ಲ. ಸುಧಾರಣೆಯ ಹಾದಿಯಲ್ಲಿ ಆರಂಭದಲ್ಲಿ ಕೆಲವು ತಪ್ಪುಗ್ರಹಿಕೆಗಳು ಹುಟ್ಟಿಕೊಂಡಿರಬಹುದು. ಆದರೆ ಸರ್ಕಾರವು ರೈತರ ಅಭಿವೃದ್ಧಿಗೆ ಬದ್ಧವಾಗಿದೆ' ಎಂದರು.


## ಜಾಹಿರಾತು ಮನವಿ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.






ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

**– ಸಂಪಾದಕರು**

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KA/BGW-1816/2019-2021
POSTING DATE : 1 & 5TH EVERY MONTH
POSTED AT : P/C RMS BHAVAN, BANGALORE PSO, Blore-26
PUBLISHED ON : 29TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ



ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು



ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು



ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು



ಶ್ರೀ ವಿ. ರಾಜು
ನಿರ್ದೇಶಕರು



ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು



ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು



ಶ್ರೀ ಡಿ. ಚನ್ನಯ್ಯ
ನಿರ್ದೇಶಕರು



ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು



ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು



ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು



ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು



ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು



ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು



ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು



ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು



ಶ್ರೀ ಶೇಖರಗೌಡ ಮಾಲಿ ಪಾಟೀಲ
ನಿರ್ದೇಶಕರು



ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು



ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು



ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು



ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು



ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು



ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು



ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.






**ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ**
ಅಧ್ಯಕ್ಷರು

"ಕಳೆದ ವರ್ಷ ಕೋವಿಡ್ ಸಂಕಷ್ಟ, ಅತಿವೃಷ್ಟಿ, ಅನಾವೃಷ್ಟಿಯಿಂದಲೂ ರೈತರು ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ದೊರಕದೇ ಕಂಗಲಾಗಿದ್ದಾರೆ. ಕೇಂದ್ರ ಸರ್ಕಾರ 3 ಕೃಷಿ ಕಾಯ್ದೆಗಳ ಅನುಷ್ಠಾನಕ್ಕೆ ಸಿದ್ದತೆ ಮಾಡಿಕೊಂಡಿದೆ. ಹಲವೆಡೆ ರೈತರಿಂದ, ಕೆಲವು ರಾಜ್ಯ ಸರ್ಕಾರಗಳಿಂದಲೂ ವಿರೋಧಗಳು ವ್ಯಕ್ತವಾಗಿದೆ. ರೈತರ ಪ್ರತಿಭಟನೆಗಳು ನಡೆಯುತ್ತಿವೆ. ಇವುಗಳಿಗೆ ಕೇಂದ್ರ ಸರ್ಕಾರ ಶೀಘ್ರ ಪರಿಹಾರಗಳನ್ನು ಕೈಗೊಳ್ಳಲೇಬೇಕಾಗಿದೆ."

# ಸಹಕಾರ ಕ್ಷೇತ್ರದಿಂದ ಉದ್ಯೋಗ ಸೃಷ್ಟಿ

ದೇಶದ ಸಹಕಾರ ಚಳವಳಿಗೆ 117 ವಸಂತಗಳು ತುಂಬಿವೆ. ರಾಷ್ಟ್ರದಲ್ಲಿ ಎಂಟು ಲಕ್ಷಕ್ಕೂ ಅಧಿಕ ವಿವಿಧ ರೀತಿಯ ಸಹಕಾರ ಸಂಘಗಳು ಇದ್ದು, ಕರ್ನಾಟಕ ರಾಜ್ಯದಲ್ಲಿ 45 ಸಾವಿರಕ್ಕೂ ಅಧಿಕ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದ ಸಹಕಾರ ಚಳವಳಿ ಬಲಿಷ್ಠಗೊಳ್ಳುವುದರ ಮೂಲಕ ಕೋಟ್ಯಾಂತರ ಜನರ ಬದುಕು ಹಸನಾಗಲು ಕಾರಣವಾಗಿದೆ.

ಸಹಕಾರ ಕ್ಷೇತ್ರದಲ್ಲಿ ಉತ್ತಮ ಸೇವೆ ಲಭ್ಯವಾಗುವುದರ ಜೊತೆಗೆ ಉದ್ಯೋಗಾವಕಾಶಗಳು ಹೆಚ್ಚುತ್ತಿವೆ. ರಾಜ್ಯದಲ್ಲಿನ ಸಹಕಾರ ಸಂಸ್ಥೆಗಳಲ್ಲಿ ಎರಡು ಲಕ್ಷಕ್ಕೂ ಅಧಿಕ ಸಿಬ್ಬಂದಿಗಳಿದ್ದಾರೆ. ಶೀಘ್ರದಲ್ಲಿಯೇ 5 ಸಾವಿರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವ ಬಗ್ಗೆ ಸಹಕಾರ ಸಚಿವರು ಸುಳಿವು ನೀಡಿದ್ದಾರೆ. ಸಹಕಾರ ಸಂಸ್ಥೆಗಳು ಪರಿಣಾಮಕಾರಿ, ಗುಣಮಟ್ಟದ ಸೇವೆ ನೀಡಲು ಮಾನವ ಸಂಪನ್ಮೂಲ ಅಗತ್ಯವಾಗಿದೆ. ಇದು ಸ್ವಾಗತಾರ್ಹ ನಿರ್ಧಾರವಾಗಿದೆ.




ಕಳೆದ ವರ್ಷ ಕೋವಿಡ್ ಸಂಕಷ್ಟ, ಅತಿವೃಷ್ಟಿ, ಅನಾವೃಷ್ಟಿಯಿಂದಲೂ ರೈತರು ತಾವು ಬೆಳೆದ ಬೆಳೆಗಳಿಗೆ ಉತ್ತಮ ಬೆಲೆ ದೊರಕದೇ ಕಂಗಲಾಗಿದ್ದಾರೆ. ಕೇಂದ್ರ ಸರ್ಕಾರ 3 ಕೃಷಿ ಕಾಯ್ದೆಗಳ ಅನುಷ್ಠಾನಕ್ಕೆ ಸಿದ್ದತೆ ಮಾಡಿಕೊಂಡಿದೆ. ಹಲವೆಡೆ ರೈತರಿಂದ, ಕೆಲವು ರಾಜ್ಯ ಸರ್ಕಾರಗಳಿಂದಲೂ ವಿರೋಧಗಳು ವ್ಯಕ್ತವಾಗಿದೆ. ರೈತರ ಪ್ರತಿಭಟನೆಗಳು ನಡೆಯುತ್ತಿವೆ. ಇವುಗಳಿಗೆ ಕೇಂದ್ರ ಸರ್ಕಾರ ಶೀಘ್ರ ಪರಿಹಾರಗಳನ್ನು ಕೈಗೊಳ್ಳಲೇಬೇಕಾಗಿದೆ. ದೇಶದಲ್ಲಿ ಸಣ್ಣ, ಮಧ್ಯಮ ರೈತರ ಸಂಖ್ಯೆ ಹೆಚ್ಚಿರುವ ಕಾರಣ ಅವರನ್ನು ರಕ್ಷಿಸಬೇಕಾಗಿರುವುದು ಕೇಂದ್ರ ಸರ್ಕಾರದ ಹೊಣೆಯಾಗಿದೆ. ಪರಸ್ಪರ ಚರ್ಚೆಗಳೊಂದಿಗೆ ಹಲವು ಸಂದೇಹಗಳನ್ನು ಬಗೆಹರಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. ಒಟ್ಟಾರೆ ರೈತರ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯೂ ಆಗಿದೆ. ಭವಿಷ್ಯದಲ್ಲಿ ರೈತರ ಕಲ್ಯಾಣಕ್ಕೆ ಆದ್ಯತೆ ಸಿಗುವಂತೆ ಸ್ಥಳೀಯ ಮಟ್ಟದಲ್ಲೂ ಚಿಂತನ-ಮಂಥನಗಳು ನಡೆಯಬೇಕಾಗಿದೆ.

ಫೆಬ್ರವರಿ-2021ರ ಮಾಹೆಯಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳ ಆಯ-ವ್ಯಯ ಮಂಡನೆಯಾಗಲಿದ್ದು, ದೇಶದ ಜನತೆ ಹಲವು ನಿರೀಕ್ಷೆಗಳಲ್ಲಿದ್ದಾರೆ. ಉಭಯ ಆಯ-ವ್ಯಯಗಳಲ್ಲಿ ಸಹಕಾರ ಕ್ಷೇತ್ರದ ಸಮಗ್ರ ಬಲವರ್ಧನೆಗೆ ಹೊಸ ಯೋಜನೆಗಳು ಪ್ರಕಟವಾಗುವ ನಿರೀಕ್ಷೆಗಳನ್ನು ಇರಿಸಿಕೊಳ್ಳಲಾಗಿದೆ. ಎಂಥ ಸಂದಿಗ್ದ ಸ್ಥಿತಿಯಲ್ಲೂ ಸಹಕಾರ ಕ್ಷೇತ್ರ ಬಲಿಷ್ಠವಾಗಿ ನಿಂತಿರುವುದಕ್ಕೆ ಸಹಕಾರಿಗಳಲ್ಲಿನ ಒಗ್ಗಟ್ಟು ಪ್ರಮುಖವಾಗಿದೆ. ಮುಂದಿನ ಜನಾಂಗದ ಜನರಿಗೆ ಮಾದರಿಯಾಗಲು "ಸರ್ವರಿಗೂ ಸಮಪಾಲು-ಸರ್ವರಿಗೂ ಸಮಬಾಳು" ತತ್ವದಡಿಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನೆರವು ಪಡೆದು ಚಳವಳಿಯನ್ನು ಬಲಪಡಿಸಲು ಮುಂದಾಗೋಣ.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಲಹೆಗಾರರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ಈ ವರ್ಷ ಕಾಗದ ರಹಿತ ಬಜೆಟ್ ಮಂಡನೆ : ಮೊಬೈಲ್ ಆಪ್ ಬಿಡುಗಡೆ ಮಾಡಿದ ನಿರ್ಮಲಾ ಸೀತಾರಾಮನ್



**ನವದೆಹಲಿ** : 2021–22ನೇ ಸಾಲಿನ ಕೇಂದ್ರ ಆಯವ್ಯಯದ ಅಂತಿಮ ಹಂತದ ರೂಪುರೇಷೆ ಸಿಹಿ ಹಲ್ವಾ ಸಮಾರಂಭದೊಂದಿಗೆ ಪ್ರಾರಂಭವಾಯಿತು. ಪಾರ್ಲಿಮೆಂಟ್ ನಾರ್ಥ್ ಬ್ಲಾಕ್‌ನಲ್ಲಿ ಕೇಂದ್ರ ಹಣಕಾಸು ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಅಂತಿಮ ಹಂತದ ಸಮಾರಂಭಕ್ಕೆ ಚಾಲನೆ ನೀಡಿದರು. ಕೇಂದ್ರ ಬಜೆಟ್‌ನ ಲಾಕ್ ಇನ್ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಪ್ರತಿವರ್ಷ ಸಾಂಪ್ರದಾಯಿಕ ಸಿಹಿ ಸಮಾರಂಭವನ್ನು ನಡೆಸಲಾಗುತ್ತದೆ. ಬಜೆಟ್ ಅನ್ನು ಇದೇ ಮೊದಲ ಬಾರಿಗೆ ಕಾಗದರಹಿತವಾಗಿ ಮಂಡಿಸುತ್ತಿರುವುದು ವಿಶೇಷವಾಗಿದ್ದು, ಫೆಬ್ರವರಿ 1 ರಂದು ಆಯವ್ಯಯ ಮಂಡನೆಯಾಗುತ್ತಿದೆ. ಡಿಜಿಟಲ್ ಆಡಳಿತದ ಅನುಕೂಲತೆಗಳನ್ನು ಬಳಸಿಕೊಂಡು ಸಂಸತ್ ಸದಸ್ಯರಿಗೆ ಮತ್ತು ಸಾಮಾನ್ಯ ಜನರಿಗೆ ಬಜೆಟ್‌ನ ದಾಖಲೆಗಳು ತಾಕಲಾಟವಿಲ್ಲದೇ ಸುಗಮವಾಗಿ ದೊರಕಿಸಿಕೊಡಲು ಕೇಂದ್ರ ಬಜೆಟ್‌ನ ಮೊಬೈಲ್ ಆ್ಯಪ್ ಅನ್ನು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಬಿಡುಗಡೆ ಮಾಡಿದರು. ಈ ಮೊಬೈಲ್ ಆ್ಯಪ್‌ನಲ್ಲಿ ನಲ್ಲಿ 14 ಕೇಂದ್ರ ಬಜೆಟ್‌ಗಳ ದಾಖಲೆಗಳು ಸಹ ಲಭ್ಯವಿದ್ದು, ಇದರಲ್ಲಿ ವಾರ್ಷಿಕ ಹಣಕಾಸು ದಾಖಲೆಗಳು, ಪೂರಕ ಬೇಡಿಕೆಗಳು, ಹಣಕಾಸು ಮಸೂದೆಗಳು, ಸಂವಿಧಾನಬದ್ಧ ದಾಖಲೆಗಳು, ಮತ್ತಿತರ ಮಾಹಿತಿಗಳು ದೊರೆಯಲಿವೆ. ಈ ಆ್ಯಪ್‌ಅನ್ನು ಕೇಂದ್ರ ಬಜೆಟ್‌ನ ವೆಬ್ ಪೋರ್ಟಲ್‌ನಿಂದ ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ. (www.indiabudget.gov.in). ಆರ್ಥಿಕ ವ್ಯವಹಾರಗಳ ಇಲಾಖೆಯ [ಡಿ.ಇ.ಎ] ಮಾರ್ಗದರ್ಶನದಲ್ಲಿ ನ್ಯಾಷನಲ್ ಇನ್ಫಾರ್ಮೇಟಿಕ್ಸ್ ಸೆಂಟರ್ [ಎನ್.ಐ.ಸಿ] ಈ ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಿದೆ.

**ಸುಭಾಷಿತ :** ಅಹಂ ಹೇಳುತ್ತದೆ 'ಒಮ್ಮೆ ಎಲ್ಲವೂ ಸರಿಯಾದರೆ ನನಗೆ ಶಾಂತಿ ದೊರೆಯುತ್ತದೆ'. ಚೈತನ್ಯ ಹೇಳುತ್ತದೆ 'ಶಾಂತಿಯನ್ನು ಹುಡುಕಿಕೋ, ಆಗ ಎಲ್ಲವೂ ಸರಿಯಾಗುತ್ತದೆ.' – ಮೆರಿಯಾನ್ ವಿಲಿಯಮ್ಸನ್

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ರಾಜ್ಯ ಸಚಿವ ಸಂಪುಟ ವಿಸ್ತರಣೆ : ನೂತನ ಸಚಿವರ ಪ್ರಮಾಣ ವಚನ ಸ್ವೀಕಾರ



**ಬೆಂಗಳೂರು :** ರಾಜಭವನದ ಗಾಜಿನ ಮನೆಯಲ್ಲಿ ರಾಜ್ಯಪಾಲ ವಜುಭಾಯಿ ವಾಲಾ ಅವರು ಏಳು ನೂತನ ಸಚಿವರಿಗೆ ಜನವರಿ 13ರಂದು ಅಧಿಕಾರ ಪದ ಹಾಗೂ ಗೋಪ್ಯತೆ ಪ್ರಮಾಣ ವಚನ ಬೋಧಿಸಿದರು.

ಸಂಪುಟ ದರ್ಜೆಯ ಸಚಿವರಾಗಿ ಉಮೇಶ ಕತ್ತಿ, ಮುರುಗೇಶ ನಿರಾಣಿ, ಆರ್. ಶಂಕರ್, ಅರವಿಂದ ಲಿಂಬಾವಳಿ, ಎಂಟಿಬಿ ನಾಗರಾಜ್, ಸಿ.ಪಿ. ಯೋಗೇಶ್ವರ್, ಎಸ್. ಅಂಗಾರ ಅವರು ಪ್ರಮಾಣ ಸ್ವೀಕರಿಸಿದ್ದಾರೆ.

## ಸಹಕಾರ ಇಲಾಖೆಯಲ್ಲಿ ಖಾಲಿ ಇರುವ 5 ಸಾವಿರ ವಿವಿಧ ಹುದ್ದೆಗಳ ಭರ್ತಿ

**ತುಮಕೂರು :** ರಾಜ್ಯದ ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಹಕಾರ ಬ್ಯಾಂಕ್/ಸಂಘಗಳಲ್ಲಿ ಖಾಲಿ ಇರುವ 5000 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ತಿಳಿಸಿದ್ದಾರೆ.

ತುಮಕೂರಿನಲ್ಲಿ ಇತ್ತೀಚೆಗೆ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಸಹಕಾರ ಬ್ಯಾಂಕ್/ಸಂಘಗಳು ಸೇರಿದಂತೆ ಸಹಕಾರ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಂಘಗಳು/ಬ್ಯಾಂಕ್‌ಗಳಲ್ಲಿ 5000 ಖಾಲಿ ಇರುವ ಹುದ್ದೆಗಳ ಭರ್ತಿ ಮಾಡಲಾಗುವುದು. ಈಗಾಗಲೇ 2 ಸಾವಿರ ಹುದ್ದೆಗಳ ಭರ್ತಿಗೆ ಸಹಕಾರ ಇಲಾಖೆ ಅನುಮತಿ ನೀಡಿದೆ ಎಂದು ಅವರು ತಿಳಿಸಿದರು.



ಪ್ರತಿ ಗ್ರಾಮ ಪಂಚಾಯಿತಿಗೊಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ಪ್ಯಾಕ್ಸ್) ತೆರೆಯುವ ಗುರಿ ಹೊಂದಲಾಗಿದೆ. ಉತ್ತರ ಕರ್ನಾಟಕ ಭಾಗದ ಗ್ರಾಮ ಪಂಚಾಯಿತಿಗಳಲ್ಲಿ 2–3 ಪ್ಯಾಕ್ಸ್‌ಗಳಿವೆ. ಪ್ರತಿ ಪಂಚಾಯಿತಿಗೊಂದು ಪ್ಯಾಕ್ಸ್ ಇದ್ದರೆ ಪ್ರಗತಿ ಸಾಧಿಸಲು ಅನುಕೂಲವಾಗುತ್ತಿದೆ. ತುಮಕೂರು ಜಿಲ್ಲೆಯಿಂದಲೇ ಪಂಚಾಯಿತಿಗೊಂದು ಪ್ಯಾಕ್ಸ್ ಸ್ಥಾಪನೆಗೆ ಚಾಲನೆ ನೀಡಲಾಗುವುದು. ನಂತರ ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ವಿಸ್ತರಿಸಲಾಗುವುದು ಹಾಗೂ ರಾಜ್ಯದ ಅಪೆಕ್ಸ್ ಬ್ಯಾಂಕ್ ಹಾಗೂ 21 ಡಿ.ಸಿ.ಸಿ ಬ್ಯಾಂಕ್ ಒಳಗೊಂಡಂತೆ 5000 ಪ್ಯಾಕ್ಸ್‌ಗಳನ್ನು ಒಂದೇ ತಂತ್ರಾಂಶದಡಿ ತಂದು ಕಾರ್ಯನಿರ್ವಹಿಸುವ ಚಿಂತನೆ ನಡೆದಿದೆ ಎಂದು ನುಡಿದರು.

ಸಹಕಾರಿಗಳಿಗೆ, ರೈತರಿಗೆ ತುಂಬಾ ಅನುಕೂಲವಾಗುವಂತಹ ಯಶಸ್ವಿನಿ ಯೋಜನೆಯನ್ನು ಮರು ಜಾರಿಗೆ ತರುವಂತೆ ಎಲ್ಲಾ ಸಹಕಾರ ಸಂಘ, ಬ್ಯಾಂಕ್, ಯುನಿಯನ್‌ಗಳಿಂದ ಕೋರಿಕೆ ಬರುತ್ತಿದೆ. ಈ ಬಗ್ಗೆ ಅಧಿಕಾರಿಗಳೊಡನೆ ಚರ್ಚಿಸಿದ್ದೇನೆ. ಈ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆ ಮತ್ತು ಸಹಕಾರ ಇಲಾಖೆಗಳ ನಡುವೆ ಕೆಲ ವ್ಯತ್ಯಾಸಗಳಿದ್ದು, ಸದ್ಯದಲ್ಲೇ ಆರೋಗ್ಯ ಇಲಾಖೆಯ ಸಭೆ ಕರೆದು ಚರ್ಚಿಸಲಾಗುವುದು ಎಂದು ತಿಳಿಸಿದರು.

ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡಿ ಪರಿಶೀಲಿಸುತ್ತಿದ್ದು, ಸಹಕಾರ ಇಲಾಖೆ / ಕ್ಷೇತ್ರದ ಸಮಸ್ಯೆಗಳು ಕಂಡುಬಂದಲ್ಲಿ ಅವುಗಳನ್ನು ಸರಿಪಡಿಸಲು ಅಗತ್ಯವಿದ್ದರೆ ನಿಯಮಗಳಿಗೆ ತಿದ್ದುಪಡಿ ತರಲಾಗುವುದು ಎಂದು ತಿಳಿಸಿದರು. ಸಹಕಾರ ಇಲಾಖೆಯ ಯೋಜನೆಗಳಾದ ಬಡವರ ಬಂಧು, ಎಸ್.ಸಿ/ಎಸ್.ಟಿ.ಗಳಿಗೆ ಸಾಲ ಸೌಲಭ್ಯ, ಕಾಯಕ ಯೋಜನೆ, ರೈತರಿಗೆ ಅಲ್ಪಾವಧಿ ಸಾಲ, ಮಧ್ಯಮಾವಧಿ ಸಾಲ, ದೀರ್ಘಾವಧಿ ಸಾಲಗಳ ವಿತರಣೆಗೆ ಸುಮಾರು 15300 ಕೋಟಿ ರೂ. ಗುರಿ ಹೊಂದಲಾಗಿದೆ. ಈ ಪೈಕಿ ರೂ.12543 ಕೋಟಿ ಸಾಲ ವಿತರಣೆ ಮಾಡಲಾಗಿದ್ದು, ಇದರಿಂದ ಶೇಕಡ 80% ರಷ್ಟು ಪ್ರಗತಿ ಸಾಧಿಸಿದಂತಾಗಿದೆ.

### ಸಹಕಾರ ಇಲಾಖಾ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ

# ಸಹಕಾರಿ ಸಂಸ್ಥೆಗಳ ಆಸ್ತಿಗಳ ಸಂರಕ್ಷಣೆಗೆ ಆದ್ಯತೆ ನೀಡಲು ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ ಸಲಹೆ



**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ ಅವರ ಅಧ್ಯಕ್ಷತೆಯಲ್ಲಿ ಸಹಕಾರ ಇಲಾಖೆಯ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆಯು ದಿನಾಂಕ : 8.1.2021 ರಂದು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಭಾಂಗಣದಲ್ಲಿ ನಡೆಯಿತು. ಸಹಕಾರ ಕ್ಷೇತ್ರವನ್ನು ದೇಶದಲ್ಲಿಯೇ ಕರ್ನಾಟಕ ರಾಜ್ಯ ಮಾದರಿ ರಾಜ್ಯವನ್ನಾಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಸಮಾಪನೆ ಹೊಂದಿರುವ ಸಹಕಾರ ಸಂಘಗಳ ಆಸ್ತಿಗಳನ್ನು ಸಂರಕ್ಷಿಸುವಂತೆ ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ ಅವರು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಸಭೆಯಲ್ಲಿ ನಿಬಂಧಕರ ಕಚೇರಿಯ ಅಪರ ನಿಬಂಧಕರುಗಳಾದ ಬಿ.ಎಸ್. ಹರೀಶ್, ವೈ.ಹೆಚ್. ಗೋಪಾಲಕೃಷ್ಣ, ಸಿ.ಎನ್. ದೇವರಾಜ್, ಎ.ಸಿ. ದಿವಾಕರ್, ಜಂಟಿ ನಿಬಂಧಕರುಗಳಾದ ಗುರುಸ್ವಾಮಿ, ಎಂ.ಡಿ. ನರಸಿಂಹಮೂರ್ತಿ, ಪ್ರಸಾದರೆಡ್ಡಿ, ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಎನ್.ಅರುಣ್‌ಕುಮಾರ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ, ಮಾರಾಟ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಆರ್. ಶ್ರೀಧರ್, ಪ್ರಾಂತೀಯ ಜಂಟಿ ನಿಬಂಧಕರುಗಳಾದ ಪಾಂಡುರಂಗ ಗರಗ್, ಜಿ.ಎಂ. ಪಾಟೀಲ್, ಪ್ರಕಾಶ್‌ರಾವ್, ಗೋಪಾಲ್ ಚವ್ಹಾಣ್ ಅವರುಗಳು ಸೇರಿದಂತೆ ಇಲಾಖೆಯ ಹಿರಿಯ ಕಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು. ಸಭೆಯಲ್ಲಿ ವಿಭಾಗವಾರು ಚರ್ಚೆಗಳು ನಡೆದವು.



## ಮಾನ್ಯ ಸದಸ್ಯ ಸಹಕಾರ ಸಂಘಗಳ ಗಮನಕ್ಕೆ

**ಮಹಾಮಂಡಳದ ಸಹಕಾರ ವಾರ್ತಾಪತ್ರಿಕೆಯಲ್ಲಿ ವರದಿಗಳನ್ನು ಪ್ರಕಟಿಸುವ ಬಗ್ಗೆ**

ಮಹಾಮಂಡಳದ ವತಿಯಿಂದ ಪ್ರತಿ ತಿಂಗಳು ಮಾಸಿಕಪತ್ರಿಕೆಯನ್ನು ಪ್ರಕಟಿಸಿ ಪತ್ತಿನ ಸಹಕಾರ ಸಂಘಗಳಿಗೆ ಕಳುಹಿಸುತ್ತಿರುವುದು ಸರಿಯಷ್ಟೆ. ಈ ಪತ್ರಿಕೆಯಲ್ಲಿ ಸದಸ್ಯ ಸಹಕಾರ ಸಂಘಗಳಿಗೆ ಉಪಯುಕ್ತವಾದ ಮಾಹಿತಿಗಳನ್ನು ಒಳಗೊಂಡ ಸಹಕಾರ ತಜ್ಞರ ಲೇಖನಗಳನ್ನು ಪ್ರಕಟಿಸಲಾಗುತ್ತಿದೆ. ಸಹಕಾರ ಕಾಯ್ದೆಗಳ ತಿದ್ದುಪಡಿಗಳು ಹಾಗೂ ಸಹಕಾರ ಇಲಾಖೆ ಹೊರಡಿಸುವ ಅಧಿಸೂಚನೆಗಳನ್ನು ಸದಸ್ಯ ಸಹಕಾರ ಸಂಘಗಳ ಗಮನಕ್ಕೆ ಪ್ರಕಟಿಸಲಾಗುತ್ತಿದೆ. ತಮ್ಮ ಸಹಕಾರ ಸಂಘಗಳ ವಿಶೇಷ ಕಾರ್ಯಚಟುವಟಿಕೆಗಳ ವರದಿಯನ್ನು ಭಾವಚಿತ್ರ ಸಮೇತ ಮಹಾಮಂಡಳಕ್ಕೆ ಇಮೇಲ್ ಮುಖಾಂತರ ಕಳುಹಿಸಿಕೊಟ್ಟಲ್ಲಿ ಈ ವರದಿಗಳನ್ನು ವಾರ್ತಾಪತ್ರಿಕೆಯಲ್ಲಿ ಆದ್ಯತೆ ಮೇರೆಗೆ ಪ್ರಕಟಿಸಲು ಕ್ರಮವಿಡಲಾಗುವುದು. ಆದ್ದರಿಂದ ತಮ್ಮ ಸಹಕಾರ ಸಂಘಗಳ ವರದಿಯನ್ನು ಭಾವಚಿತ್ರದ ಸಮೇತ ಕಳುಹಿಸಿಕೊಡಲು ಕೋರಲಾಗಿದೆ.

ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

## ಸಹಕಾರ ಇಲಾಖೆ ಪತ್ರಾಂಕಿತ ಅಧಿಕಾರಿಗಳ ಸಂಘದ ದಿನಚರಿ ಬಿಡುಗಡೆ

# ಸಹಕಾರ ಕ್ಷೇತ್ರದ ಸಮಗ್ರ ಬಲವರ್ಧನೆಗೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಸಲಹೆ



**ಬೆಂಗಳೂರು :** ರಾಜ್ಯದ ಸಹಕಾರ ಚಳವಳಿಯ ಪ್ರಗತಿ ಆಶಾದಾಯಕವಾಗಿದ್ದು, ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವಂತೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರು ಇಲಾಖೆಯ ಅಧಿಕಾರಿಗಳಿಗೆ ಸಲಹೆ ಮಾಡಿದರು.

ಸಹಕಾರ ಸಂಘಗಳ ನಿಬಂಧಕರ ಕಚೇರಿಯ ಸಭಾಂಗಣದಲ್ಲಿ ಸಹಕಾರ ಇಲಾಖೆಯ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಘದ 2021ರ ಸಹಕಾರ ದಿನಚರಿ ಮತ್ತು ಕ್ಯಾಲೆಂಡರ್ ಬಿಡುಗಡೆ ಮಾಡಿ, ನಂತರ ಅವರು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು.

ರಾಜ್ಯದಲ್ಲಿ ಹಲವು ಸಹಕಾರ ವಲಯಗಳು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸುವಂತಾಗಲು ಅಧಿಕಾರಿಗಳ ಮಾರ್ಗದರ್ಶನವೂ ಅಗತ್ಯ. ಸಹಕಾರ ರಂಗವನ್ನು ಸಮಗ್ರವಾಗಿ ಅಭಿವೃದ್ಧಿಗೊಳಿಸಲು ರಾಜ್ಯ ಸರ್ಕಾರ ಎಲ್ಲ ರೀತಿಯ ನೆರವು–ಮಾರ್ಗದರ್ಶನ ಮಾಡಲಿದೆ ಎಂದರು.

ಕೋವಿಡ್–19ರ ಸಂಕಷ್ಟದ ಸಂದರ್ಭದಲ್ಲಿ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳ ಸೇವೆಯನ್ನು ಶ್ಲಾಘಿಸಿದ ಸಚಿವರು, ಈಗಾಗಲೇ ಆರಂಭಗೊಂಡಿರುವ ಆರ್ಥಿಕ ಸ್ಪಂದನ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಯಶಸ್ವಿಗೊಳಿಸಲು ಅಧಿಕಾರಿಗಳಿಗೆ ಸಲಹೆ ಮಾಡಿದರು.

ರಾಜ್ಯದಲ್ಲಿ ನಷ್ಟದಲ್ಲಿರುವ ಸಹಕಾರ ಸಂಘಗಳ ಬಲವರ್ಧನೆಗೆ ಕ್ರಮವಿಡಲು ಅಧಿಕಾರಿಗಳಿಗೆ ಸೂಚಿಸಿದ ಸಚಿವರು, ಸಹಕಾರ ಕ್ಷೇತ್ರದ ಮೂಲಕ ನಾಡಿನ ಜನತೆ ಸುಖ ಜೀವನ ನಡೆಸುವಂತಾಗಬೇಕು ಎಂದರು. ಇದೇ ಸಂದರ್ಭದಲ್ಲಿ ಸಹಕಾರ ಇಲಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಗಳಿಗೆ ನೂತನ ವರ್ಷ 2021 ಮತ್ತು ಸಂಕ್ರಾಂತಿಯ ಶುಭಾಶಯಗಳನ್ನು ತಿಳಿಸಿದರು.

ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ ಅವರು ಮಾತನಾಡಿ, ಸಹಕಾರ ಇಲಾಖೆಯಲ್ಲಿ ಹೊಸದಾಗಿ ಅನುಷ್ಠಾನಗೊಳಿಸಬಹುದಾದ ಯೋಜನೆಗಳ ಬಗ್ಗೆ ಸಮಗ್ರ ಯೋಜನಾ ವರದಿಗಳನ್ನು ಸಂಕ್ಷಿಪ್ತವಾಗಿ ಸಿದ್ದಪಡಿಸಿ ಸರ್ಕಾರಕ್ಕೆ ಸಲ್ಲಿಸಬಹುದು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯತತ್ಪರರಾಗಬೇಕು ಎಂದು ತಿಳಿಸಿದರು.

"ಆತ್ಮನಿರ್ಭರ ಭಾರತ" ಯೋಜನೆಯಡಿಯಲ್ಲಿ ಸಹಕಾರ ಇಲಾಖೆಯ ಮಹತ್ವಕಾಂಕ್ಷಿ ಯೋಜನೆಯಾದ "ಆರ್ಥಿಕ ಸ್ಪಂದನ" ಕಾರ್ಯಕ್ರಮವನ್ನು ಸಂಪೂರ್ಣ ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಮಾರ್ಗದರ್ಶನ ಮಾಡಿದರು.

ಕಾರ್ಯಕ್ರಮದ ಆರಂಭದಲ್ಲಿ ಪತ್ರಾಂಕಿತ ಅಧಿಕಾರಿಗಳ ಸಂಘದ ಅಧ್ಯಕ್ಷರು ಹಾಗೂ ಅಪರ ನಿಬಂಧಕರಾದ ಸಿ.ಎನ್. ದೇವರಾಜ್ ಅವರು ಸಹಕಾರ ಇಲಾಖೆಯಲ್ಲಿ ಆಗಬೇಕಾದ ಯೋಜನೆಗಳ ಬಗ್ಗೆ ಮಾತನಾಡಿದರು ಹಾಗೂ ಇಲಾಖೆಗೆ ಸಂಬಂಧಿಸಿದ ಪ್ರಮುಖ ಬೇಡಿಕೆಗಳನ್ನು ಈಡೇರಿಸುವಂತೆ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಜತೆಗೆ ಪ್ರೊಬೆಷನರಿ ಸಹಾಯಕ ನಿಬಂಧಕರುಗಳ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಅಧಿಕಾರಿಗಳ ಸಂಘದ ಕಾರ್ಯದರ್ಶಿ ಕೆ. ಗಗನ, ನಿರ್ದೇಶಕರಾದ ದಿಲೀಪ್‌ಕುಮಾರ್ ಅವರು ಸಹಕಾರ ಸಚಿವರಿಗೆ ಮನವಿಪತ್ರ ಸಲ್ಲಿಸಿದರು. ಅಪರ ನಿಬಂಧಕರುಗಳಾದ ಬಿ.ಎಸ್. ಹರೀಶ್, ವೈ.ಎಚ್. ಗೋಪಾಲಕೃಷ್ಣ, ಎಸ್. ಎನ್. ಅರುಣ್‌ಕುಮಾರ್, ಬಿ.ಸಿ. ಸತೀಶ್, ಎಂ. ವೆಂಕಟಸ್ವಾಮಿ, ಎ.ಸಿ. ದಿವಾಕರ್ ಅವರುಗಳು ಸೇರಿದಂತೆ ಇಲಾಖೆಯ ಹಿರಿಯ, ಕಿರಿಯ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಕೊನೆಯಲ್ಲಿ ವಸತಿ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಜಂಟಿ ನಿಬಂಧಕರಾದ ಅಶ್ವಥನಾರಾಯಣ ಅವರು ವಂದನಾರ್ಪಣೆ ಸಲ್ಲಿಸಿದರು.

# ಬಡಗಬೆಟ್ಟು ಕ್ರೆಡಿಟ್ ಕೋ-ಆಪ್ ಸೊಸೈಟಿಗೆ 6ನೇ ಬಾರಿಗೆ "ರಾಜ್ಯ ಮಟ್ಟದ ಅತ್ಯುತ್ತಮ ಸಹಕಾರಿ ಸಂಘ ಪ್ರಶಸ್ತಿ"



ಮಂಗಳೂರಿನಲ್ಲಿ ನಡೆದ ರಾಜ್ಯ ಮಟ್ಟದ 67 ನೇ ಅಖಿಲ ಭಾರತ ಸಹಕಾರ ಸಪ್ತಾಹದಲ್ಲಿ ಬಡಗಬೆಟ್ಟು ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯು ಸಹಕಾರ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಗುರುತಿಸಿ ರಾಜ್ಯ ಮಟ್ಟದ ಉತ್ತಮ ಸಹಕಾರ ಸಂಘ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಂಘದ ಆಡಳಿತ ನಿರ್ದೇಶಕರಾದ ವಿನಯಕುಮಾರ್ ಟಿ.ಎ, ಜಯ ಶೆಟ್ಟಿ ಸಂಘದ ಸಹಾಯಕ ಪ್ರಧಾನ ವ್ಯವಸ್ಥಾಪಕ ರಾಜೇಶ್ ವಿ.ಎಸ್ ಪ್ರಶಸ್ತಿಯನ್ನು ರಾಜ್ಯ ಸಹಕಾರ ಸಚಿವರಾದ ಎಸ್.ಟಿ ಸೋಮಶೇಖರ್ ಅವರಿಂದ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ದ.ಕ ಜಿಲ್ಲಾ ಲೋಕಸಭಾ ಸಂಸದರಾದ ನಳಿನ್ ಕುಮಾರ್ ಕಟೀಲು, ಶಾಸಕ ವೇದವ್ಯಾಸ ಕಾಮತ್, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ, ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅಧ್ಯಕ್ಷರಾದ ಡಾ। ಎಂ.ಎನ್ ರಾಜೇಂದ್ರ ಕುಮಾರ್ , ಉಡುಪಿ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಹಾಗೂ ಬಡಗಬೆಟ್ಟು ಕ್ರೆಡಿಟ್ ಕೋ ಆಪರೇಟಿವ್ ಪ್ರಧಾನ ವ್ಯವಸ್ಥಾಪಕ ಜಯಕರ ಶೆಟ್ಟಿ ಇಂದ್ರಾಳಿ, ದ.ಕ ಹಾಗೂ ಉಡುಪಿ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರಾದ ಪ್ರವೀಣ್ ಬಿ. ನಾಯಕ್ ಉಪಸ್ಥಿತರಿದ್ದರು.

## ಕಟ್ಟಡ ನಿಧಿ ದೇಣಿಗೆ ಸಲ್ಲಿಕೆ



ಸ್ವಾಮಿ ವಿವೇಕಾನಂದ ಪತ್ತಿನ ಸಹಕಾರ ಸಂಘ ನಿ., ತುಮಕೂರು ಸಂಘದ ವತಿಯಿಂದ ಮಹಾಮಂಡಳದ ನಿರ್ದೇಶಕರಾದ ಶ್ರೀ ಜಿ.ಮಲ್ಲಿಕಾರ್ಜುನಯ್ಯರವರು ಮಹಾಮಂಡಳಕ್ಕೆ ಕಟ್ಟಡ ದೇಣಿಗೆ ರೂ.25,000/-ಗಳ ಚೆಕ್ಕನ್ನು ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡವರಿಗೆ ನೀಡಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ವಿ.ರಾಜು, ಡಾ॥ ಸಂಜಯ ಪಿ ಹೊಸಮಠ, ಶ್ರೀ ಡಿ.ಚನ್ನಯ್ಯ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚ ರಡ್ಡಿ, ಶ್ರೀ ಕೆ.ಎಸ್.ಗುರುಪ್ರಸಾದ್, ಸಲಹೆಗಾರರು ಮತ್ತು ಶ್ರೀಮತಿ ಆಶಾಲತಾ.ಪಿ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)ರವರು ಉಪಸ್ಥಿತರಿದ್ದರು.



ಪತ್ತಿನ ಸಂಘಗಳ ಮಹಾಮಂಡಳದ ನಿರ್ದೇಶಕರು ಹಾಗೂ ದುರ್ಗಿಗುಡಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಶಿವಮೊಗ್ಗ ಇದರ ನಿರ್ದೇಶಕರು ಆಗಿರುವ ಶ್ರೀ ವಿ.ರಾಜುರವರು ರವರು ಸಂಘದ ವತಿಯಿಂದ ಮಹಾಮಂಡಳಕ್ಕೆ ಕಟ್ಟಡ ದೇಣಿಗೆ ರೂ.25,000/–ಗಳ ಚೆಕ್ಕನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡರವರಿಗೆ ನೀಡಿದರು. ಈ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಡಾ॥ ಸಂಜಯ ಪಿ. ಹೊಸಮಠ, ಶ್ರೀ ಡಿ.ಚನ್ನಯ್ಯ, ಶ್ರೀ ಜಿ. ಮಲ್ಲಿಕಾರ್ಜುನಯ್ಯ, ಶ್ರೀ ತಮ್ಮಣ್ಣ ಬಾಲಪ್ಪ ಕೆಂಚರಡ್ಡಿ, ಶ್ರೀ ಕೆ.ಎಸ್.ಗುರುಪ್ರಸಾದ್, ಸಲಹೆಗಾರರು ಮತ್ತು ಶ್ರೀಮತಿ ಆಶಾಲತಾ.ಪಿ ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ) ರವರು ಉಪಸ್ಥಿತರಿದ್ದರು.

## ಶ್ರೀ ಗುರುದೇವ ವಿವಿಧೋದ್ದೇಶ ಸಹಕಾರ ಸಂಘಕ್ಕೆ "ಸಾಧನ" ಪ್ರಶಸ್ತಿ



**ಬೆಳ್ತಂಗಡಿ :** ಶ್ರೀ ಗುರುದೇವ ವಿವಿಧೋದ್ದೇಶ ಸಹಕಾರ ಸಂಘ (ನಿ.) ಬೆಳ್ತಂಗಡಿ ಇದರ ಸಹಕಾರ ಕ್ಷೇತ್ರದ ಸಾಧನೆಯನ್ನು ಗುರುತಿಸಿ ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಸಾಧನ ಪ್ರಶಸ್ತಿ ನೀಡಿ ಗೌರವಿಸಿದೆ. ಸಂಘದ ಅಧ್ಯಕ್ಷರ ಪರವಾಗಿ ಸಂಘದ ವಿಶೇಷಾಧಿಕಾರಿ ಎಂ ಮೋನಪ್ಪ ಪೂಜಾರಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅಶ್ವತ್ಥ್ ಕುಮಾರ್ ಇವರನ್ನು ದಕ್ಷಿಣ ಕನ್ನಡ ಜಿಲ್ಲಾ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾದ ಡಾ.ಎಂ. ಎನ್.ರಾಜೇಂದ್ರಕುಮಾರ್ ಆಡಳಿತಮಂಡಳಿ ನಿರ್ದೇಶಕರು ಸನ್ಮಾನಿಸಿ ಗೌರವಿಸಿದರು.



**ಬೆಂಗಳೂರು :** ಇತ್ತೀಚೆಗೆ ಮಹಾಮಂಡಳದ ಸದಸ್ಯ ಸಂಘವಾದ ಉನ್ನತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಇದರ ನೂತನ ಇ–ಸ್ಟಾಂಪಿಂಗ್ ಉಪಕೇಂದ್ರವನ್ನು ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಡಿ.ಚನ್ನಯ್ಯ ಮತ್ತು ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘದ ಅಧ್ಯಕ್ಷರಾದ ಶ್ರೀಮತಿ ರೇಣುಕಾ ಮತ್ತು ಇತರೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಸಹಕಾರಕ್ಕೆ ಕೇಂದ್ರದಲ್ಲಿ ಪ್ರತ್ಯೇಕ ಸಚಿವಾಲಯ ಸಹಕಾರ ಕ್ಷೇತ್ರಕ್ಕೆ ಸದನ ಪ್ರಾತಿನಿಧ್ಯ ಪರಿಶೀಲನಾರ್ಹ

▸▸ ಡಾ. ಎಂ.ಆರ್. ವೆಂಕಟೇಶ್


**ಪ್ರತಿ ಚುನಾವಣೆ ಬಂದಾಗಲೂ ಎಲ್ಲ ಪಕ್ಷದ ನಾಯಕರು, ಯಾವ ಜಿಲ್ಲೆಯಲ್ಲಿ ಡಿಸಿಸಿ ಬ್ಯಾಂಕ್‌ಗಳು, ಕೃಷಿ ಪತ್ತಿನ ಸಹಕಾರ ಪ್ರಾಥಮಿಕ ಸಹಕಾರ ಸಂಘಗಳು, ಅರ್ಬನ್ ಕೋ-ಆಪರೇಟಿವ್ ಬ್ಯಾಂಕುಗಳು ತಮ್ಮ ಹಿಡಿತದಲ್ಲಿವೆ ಎನ್ನುವುದನ್ನು ನೋಡುತ್ತಾರೆ. ಸಹಕಾರ ಕ್ಷೇತ್ರದ ಮುಖೇನ ಕೆಳಮಟ್ಟದ ಜನಸಾಮಾನ್ಯ ಅಥವಾ ಮತದಾರ ಪ್ರಭುಗಳನ್ನು ತಲುಪುವುದು ಬಲು ಸುಲಭವೆಂಬುದು ಎಲ್ಲಾ ರಾಜಕೀಯ ಪಕ್ಷಗಳಿಗೂ ವೇದ್ಯವಾಗಿರುವ ವಿಚಾರ. 112 ವರ್ಷಗಳ ಇತಿಹಾಸವಿರುವ ಭಾರತೀಯ ಸಹಕಾರ ಚಳವಳಿ ದೇಶದ ಜಿಡಿಪಿಗೆ ಸುಮಾರು ಶೇ.8ರಷ್ಟು ಪಾಲನ್ನು ನೀಡುತ್ತಿದೆ. ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಸಹಕಾರಿ ಕ್ಷೇತ್ರಕ್ಕೊಂದು ಸ್ಪಷ್ಟ ರಾಷ್ಟ್ರೀಯ ನೀತಿ ರೂಪಿಸುವ ಅವಶ್ಯಕತೆಯಿದೆ. ಕೃಷಿಕರ, ಶ್ರಮಿಕರ, ಬಡ ಮಧ್ಯಮ ವರ್ಗದ ಹಾಗೂ ಕೌಶಲ್ಯರಹಿತ ಜನರೇ ಹೆಚ್ಚು ಅವಲಂಬಿತರಾಗಿರುವ ಈ ಕ್ಷೇತ್ರಕ್ಕೆ ಸಾಂವಿಧಾನಿಕ ಮಾನ್ಯತೆಯುಳ್ಳ ತಜ್ಞರ ಸಲಹಾ ಮಂಡಳಿಯನ್ನು ಸ್ಥಾಪಿಸಿ ಸಹಕಾರ ಸಂಬಂಧಗಳನ್ನು ಅಭಿವೃದ್ಧಿಪಡಿಸುವ ಮತ್ತು ಸಹಕಾರ ಚಳವಳಿಯ ಸಮನ್ವಯ ಕಾರ್ಯಾಚರಣೆಗೆ ನೆರವು ನೀಡುವ ಅವಶ್ಯಕತೆಯಿದೆ.**

ದೇಶದ ಶೇ.90ರಷ್ಟು ಮಂದಿ ಅಥವಾ ಕೆಳ ಮಧ್ಯಮ ವರ್ಗದವರು. ದೇಶ ಅಭಿವೃದ್ಧಿ ಹೊಂದಬೇಕಾದರೆ ಈ ಜನತೆಯ ಸರ್ವತೋಮುಖ ಅಭಿವೃದ್ಧಿಗೆ ಹೆಚ್ಚೆಚ್ಚು ಒತ್ತು ನೀಡಬೇಕು. ಸ್ವಾತಂತ್ರ್ಯ ಬಂದಾಗಿಂದ ದೇಶದ ಈ ಬಹುದೊಡ್ಡ ವರ್ಗವನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಹೋರಾಡುತ್ತಿರುವುದು ಸಹಕಾರಿ ಕ್ಷೇತ್ರ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿರುವ ಸಹಕಾರ ಕ್ಷೇತ್ರವನ್ನು ದೇಹದ ಆರ್ಥಿಕತೆಯಲ್ಲಿ ಬಹುದೊಡ್ಡ ಕೊಡುಗೆ ನೀಡುತ್ತಿರುವ 2ನೇ ಅತಿದೊಡ್ಡ ವಲಯವೆಂದು ಗುರುತಿಸಿರುವುದು ಇದರು ಪ್ರಾಮುಖ್ಯತೆಯನ್ನು ತೋರಿಸುತ್ತದೆ. ಗ್ರಾಮೀಣ ಭಾಗದ, ಸಮಾಜದ ದುರ್ಬಲ ವರ್ಗದ, ರೈತಾಪಿ ವರ್ಗದ ಹಿತಾಸಕ್ತಿಗಳಿಗೆ ಪೂರಕವಾಗಿ ಅತ್ಯಂತ ಪರಿಣಾಮಕಾರಿಯಾಗಿ ಸಹಕಾರ ಕ್ಷೇತ್ರ ಕಾರ್ಯವರ್ಹಿಸುತ್ತಿದೆ. ದೇಶದ ಶೇ.98 ಗ್ರಾಮೀಣ ಪ್ರದೇಶವನ್ನು ವ್ಯಾಪಿಸಿರುವ ಈ ಸಹಕಾರಿ ಆಂದೋಲನ ಪ್ರಪಂಚದಲ್ಲಿ ದೊಡ್ಡದು. ದೇಶದ ಒಟ್ಟು ಸುಮಾರು 7.5 ಲಕ್ಷ ಹಳ್ಳಿಗಳ ಪೈಕಿ ಸುಮಾರು 6,44,458 ಹಳ್ಳಿಗಳನ್ನು ಪ್ರಾಥಮಿಕ ಸಹಕಾರ ಸಂಘಗಳು ವ್ಯಾಪಿಸಿರುವುದು ಈ ಕ್ಷೇತ್ರದ ಅಗಾಧತೆಯನ್ನು ನಿರೂಪಿಸುತ್ತದೆ.



ದೇಶದ ಆರ್ಥಿಕತೆಯ ವಿವಿಧ ಆಯಾಮಗಳಲ್ಲಿ ಸಹಕಾರಿ ಕ್ಷೇತ್ರದ ಶೇಕಡವಾರು ಪಾಲನ್ನು ನೋಡುವುದಾದರೆ ನೇರ ಉದ್ಯೋಗದಲ್ಲಿ ಶೇ.13.30 ಕೊಡುಗೆಯನ್ನು ನೀಡಿದ್ದು, ಸ್ವಯಂ ಉದ್ಯೋಗವೊಂದರಲ್ಲೇ ಸುಮಾರು ಶೇ.10.91 ಪಾಲನ್ನು ಹೊಂದಿದೆ. ಗ್ರಾಮೀಣ ಭಾಗದ ಜನರಲ್ಲಿ ಉತ್ತಮ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸುವಂಥ ತರಬೇತಿ ನೀಡಿ ನಿರುದ್ಯೋಗ ಸಮಸ್ಯೆ ನಿವಾರಿಸುವಲ್ಲಿ ಸಹಕಾರಿ ಕ್ಷೇತ್ರದಲ್ಲಿ ವಿಪುಲ ಅವಕಾಶಗಳಿರುವುದು ಬಹು ಮುಖ್ಯವಾಗಿ ಗಮನಿಸಬೇಕಾದ ಅಂಶ. ದೇಶದಲ್ಲಿ ಪ್ರಸ್ತುತ ಸುಮಾರು 8,34,355 ಲಕ್ಷ ಎಲ್ಲಾ ರೀತಿಯ ಒಟ್ಟು ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು ಈ ಸಹಕಾರ ಕ್ಷೇತ್ರದ ಒಟ್ಟು ಸದಸ್ಯರ ಸಂಖ್ಯೆ ಸುಮಾರು 290.06 ಮಿಲಿಯನ್‌ಗೂ ಅಧಿಕ. ಸುಮಾರು ರೂ.40,68,868 ಮಿಲಿಯಕ್ಕೂ ಅಧಿಕ ಷೇರು ಬಂಡವಾಳ ಹೂಡಿಕೆಯಾಗಿದ್ದು ಸುಮಾರು ರೂ.17,00,000 ಮಿಲಿಯನ್ ನಷ್ಟು ಸಾಲವನ್ನು ಸಹಕಾರಿ ಕ್ಷೇತ್ರ ಒಂದರಿಂದಲೇ ನೀಡಲಾಗಿದೆ ಎಂಬುದನ್ನು ಗಮನಿಸಲೇಬೇಕು. ಗ್ರಾಮೀಣ ಭಾಗದ ಜನರಲ್ಲಿ ಉತ್ತಮ ಕೌಶಲ ಅಭಿವೃದ್ಧಿಯನ್ನು ಉತ್ತೇಜಿಸುವಂತಹ ತರಬೇತಿಯನ್ನು ನೀಡಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವಲ್ಲಿ ವಿಪುಲ ಅವಕಾಶಗಳಿರುವುದು ಮುಖ್ಯವಾಗಿ ಗಮನಿಸಬೇಕಾದ ಅಂಶ, ಒಂದರ್ಥದಲ್ಲಿ ಇಡೀ ವಿಶ್ವ 2008ರಲ್ಲಿ ಆರ್ಥಿಕ ಹಿಂಜರಿತಕ್ಕೆ ಒಳಗಾಗಿದ್ದಾಗಲೂ, ದೇಶದ ಆರ್ಥಿಕ ವ್ಯವಸ್ಥೆ ಸಂಪೂರ್ಣ ನೆಲಕಚ್ಚದಿರುವುದಕ್ಕೆ ಮೂಲ ಕಾರಣವೂ ಇದೇ ಸಹಕಾರಿ ಕ್ಷೇತ್ರ.

ದೇಶದ ಕೆಲ ರಾಜ್ಯಗಳಲ್ಲಿರುವ ವಿಧಾನ ಪರಿಷತ್ ಹಾಗೂ ಸಂಸತ್ ವ್ಯವಸ್ಥೆಯಲ್ಲಿರುವ ರಾಜ್ಯ ಸಭೆಗೆ ವಿವಿಧ ಕ್ಷೇತ್ರದವರನ್ನು ಆಯ್ಕೆಮಾಡುವುದು ಸಹಜ. ಇದಕ್ಕಾಗಿ ಸಂವಿಧಾನದಲ್ಲಿ ಅವಕಾಶ ನೀಡಲಾಗಿದೆ. ವಿಶೇಷ ಸಾಧನೆಗೈದ ಸಾಹಿತ್ಯ, ಶಿಕ್ಷಣ, ಕ್ರೀಡಾ, ಸ್ಥಳೀಯ ಸಂಸ್ಥೆಗಳಿಂದ ಇಂತಿಷ್ಟು ಜನರನ್ನು ಆಯ್ಕೆ ಮಾಡಲಾಗುತ್ತದೆ, ಹಾಗೆ ನೋಡಿದರೆ ವಿವಿಧ ಕ್ಷೇತ್ರದ ತಜ್ಞರನ್ನು ಒಂದೆಡೆ ಸೇರಿಸಿ, ಆ ಕ್ಷೇತ್ರದಲ್ಲಿರುವ ಸಮಸ್ಯೆ, ಅದಕ್ಕೆ ಪರಿಹಾರ ಹಾಗೂ ಅಭಿವೃದ್ಧಿಗೆ ಆಗಬೇಕಿರುವ ಯೋಜನೆಗಳ ಬಗ್ಗೆ ಗಂಭೀರ






ಚರ್ಚೆ ಮಾಡುವುದಕ್ಕಾಗಿಯೇ ವಿಧಾನ ಪರಿಷತ್ ಅನ್ನು ಮೈಸೂರು ಒಡೆಯರು ಆರಂಭಿಸಿದ್ದರು. ಮೇಲ್ಮನೆ ಅಥವಾ ಚಿಂತಕರ ಚಾವಡಿ ಎಂದೇ ಹೇಳುವ ಪರಿಷತ್‌ನಲ್ಲಿ ವಿವಿಧ ಕ್ಷೇತ್ರಗಳನ್ನು ಪರಿಗಣಿಸಿದ್ದರೂ, ಸಹಕಾರ ಕ್ಷೇತ್ರಕ್ಕೆ ಪ್ರಾತಿನಿಧ್ಯ ನೀಡದಿರುವುದು ಮಾತ್ರವಿಪರ್ಯಾಸ.

ದೇಶವನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಸದನದಲ್ಲಿ ಚರ್ಚೆಯಾಗುವಾಗ, ಅದರ ಬಗ್ಗೆ ಮಾತನಾಡುವುದಕ್ಕೆ ಅಧಿಕೃತಧ್ವನಿ ಇರುವ ಸಹಕಾರಿಗಳಿಗೆ ಸದನದಲ್ಲಿ ಅಧಿಕೃತ ಪ್ರಾತಿನಿಧ್ಯವನ್ನು ಸರಕಾರಗಳು ನೀಡಿಲ್ಲ. ಕರ್ನಾಟಕದಲ್ಲಿ ನೋಡುವುದಾದರೆ ಎಲ್ಲಾ ರೀತಿಯ ಒಟ್ಟು 42551 ಸಹಕಾರ ಸಂಘಗಳು ಈಗಲೂ ಸದೃಢವಾಗಿ ಕಾರ್ಯನಿರ್ವಹಿಸುತ್ತಲಿವೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ, ತಾಲ್ಲೂಕು ಮಟ್ಟದ ಹಾಗೂ ಅದಕ್ಕಿಂತ ಕೆಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಸಂಘಗಳು ಒಟ್ಟು 39701. ಅಂದರೆ, ರಾಜ್ಯದಲ್ಲಿ ವಿವಿಧ ಸಹಕಾರಿ ಸಂಘಗಳ ಪೈಕಿ ಶೇ.90ರಷ್ಟು ಸಂಘಗಳು ಈ ಭಾಗಕ್ಕೆ ಸೇರಿದ್ದಾಗಿವೆ, ಖಾಸಗಿ ಹಾಗೂ ರಾಷ್ಟ್ರೀಯ ಬ್ಯಾಂಕ್‌ಗಳಿಗಿಂತ ಭಿನ್ನವಾಗಿ ಈ ಸಹಕಾರಿ ಸಂಘಗಳು ಕಾರ್ಯನಿರ್ವಹಿಸುವುದರಿಂದ, ರೈತರಿಗೆ ಹಾಗೂ ಆರ್ಥಿಕವಾಗಿ ಶಕ್ತರಲ್ಲದವರಿಗೆ ಈ ಬ್ಯಾಂಕ್‌ಗಳು ವರದಾನವಾಗುತ್ತವೆ.

ಆದ್ದರಿಂದಲೇ ಗ್ರಾಮೀಣ ಭಾಗದ ಬಹುತೇಕರು ಈ ಬ್ಯಾಂಕ್‌ಗಳಲ್ಲಿ ವ್ಯವಹರಿಸಲು ಇಚ್ಛಿಸುತ್ತಾರೆ. ಅದರಲ್ಲೂ ಗ್ರಾಮೀಣ ಭಾಗದಲ್ಲಿ ಕಿಸಾನ್ ಕ್ರೆಡಿಟ್, ರಸಗೊಬ್ಬರ ಖರೀದಿ, ಬೀಜ ಬಿತ್ತನೆ ಖರೀದಿಗೆಂದು ರೈತರು ಕೃಷಿ ಪತ್ತಿನ ಪ್ರಾಥಮಿಕ ಸಹಕಾರ ಸಂಘಗಳ ನೆರವನ್ನು ಪಡೆಯುತ್ತಾರೆ. ಆದ್ದರಿಂದ ದೇಹದ ಯಾವುದೇ ಭಾಗಕ್ಕೆ ಹೋದರೂ ಸಹಕಾರಿ ಸಂಘಗಳಲ್ಲಿ ಅಧಿಕಾರ ಪಡೆದವರು ಸ್ಥಳೀಯವಾಗಿ ಹೆಚ್ಚು ಪ್ರಭಾವ ಬೀರುತ್ತಾರೆ. ಆದ್ದರಿಂದ ಬಹುತೇಕ ಜಿಲ್ಲೆಗಳಲ್ಲಿ ಡಿಸಿಸಿ ಬ್ಯಾಂಕ್‌ಗಳ ವೋಟ್ ಬ್ಯಾಂಕ್ ಯಾರ ಪರವಾಗಿರುವುದೋ ಅವರೇ ಚುನಾವಣೆಯಲ್ಲಿ ಸುಲಭ ಗೆಲುವನ್ನು ಪಡೆಯಲು ಸಾಧ್ಯವಾಗುತ್ತದೆ, ಈ ಬ್ಯಾಂಕ್‌ಗಳಲ್ಲಿ ಬಿಗಿಹಿಡಿತ ಇಟ್ಟುಕೊಂಡರೆ, ಇಡೀ ಜಿಲ್ಲೆಯನ್ನು ಗೆಲ್ಲಬಹುದು ಎನ್ನುವ ವಿಶ್ವಾಸದಲ್ಲಿ ರಾಜಕೀಯ ನಾಯಕರು ಇರುತ್ತಾರೆ. ಈ ಜಿಲ್ಲಾ ಮಟ್ಟದ ಬ್ಯಾಂಕ್‌ಗಳು ಎಷ್ಟರ ಮಟ್ಟಿಗೆ ಪ್ರಭಾವ ಹೊಂದಿರುತ್ತವೆ ಎನ್ನುವುದಕ್ಕೆ ಇತ್ತೀಚಿನ ಒಂದು ಸಣ್ಣ ಉದಾಹರಣೆಯೆಂದರೆ ಕಾಂಗ್ರೆಸ್–ಜೆಡಿಎಸ್ ಮೈತ್ರಿ ಸರಕಾರದಲ್ಲಿ ಬೆಳಗಾವಿಯ ಡಿಸಿಸಿ ಬ್ಯಾಂಕ್ ಒಂದರ ಚುನಾವಣಾ ಸಮಯದಲ್ಲಿ ಇಬ್ಬರು ಶಾಸಕರುಗಳ ಮಧ್ಯೆ ನಡೆದ ಜಿದ್ದಾಜಿದ್ದಿ ರಾಜಕೀಯ ಪ್ರಹಸನ. ಪ್ರತಿ ಚುನಾವಣೆ ಬಂದಾಗಲೂ ಎಲ್ಲ ಪಕ್ಷದ ನಾಯಕರು, ಯಾವ ಜಿಲ್ಲೆಯಲ್ಲಿ ಎಷ್ಟು ಡಿಸಿಸಿ ಬ್ಯಾಂಕ್‌ಗಳು, ಕೃಷಿ ಪತ್ತಿನ ಸಹಕಾರ ಪ್ರಾಥಮಿಕ ಸಹಕಾರ ಸಂಘಗಳು, ಅರ್ಬನ್ ಕೋ–ಆಪರೇಟಿವ್ ಬ್ಯಾಂಕುಗಳು ತಮ್ಮ ಹಿಡಿತದಲ್ಲಿವೆ ಎನ್ನುವುದನ್ನು ನೋಡುತ್ತಾರೆ. ಸಹಕಾರ ಕ್ಷೇತ್ರದ ಮುಖೇನ ಕೆಳಮಟ್ಟದ ಜನಸಾಮಾನ್ಯ ಅಥವಾ ಮತದಾರ ಪ್ರಭುಗಳನ್ನು ತಲುಪುವುದು ಬಲು ಸುಲಭವೆಂಬುದು ಎಲ್ಲಾ ರಾಜಕೀಯ ಪಕ್ಷಗಳಿಗೂ ವೇದ್ಯವಾಗಿರುವ ವಿಚಾರ.

112 ವರ್ಷಗಳ ಇತಿಹಾಸವಿರುವ ಭಾರತೀಯ ಸಹಕಾರ ಚಳವಳಿ ದೇಶದ ಜಿಡಿಪಿಗೆ ಸುಮಾರು ಶೇ.8ರಷ್ಟು ಪಾಲನ್ನು ನೀಡುತ್ತಿದೆ. ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡುತ್ತಿರುವ ಸಹಕಾರಿ ಕ್ಷೇತ್ರಕ್ಕೊಂದು ಸ್ಪಷ್ಟ ರಾಷ್ಟ್ರೀಯ ನೀತಿ ರೂಪಿಸುವ ಅವಶ್ಯಕತೆಯಿದೆ. ಕೃಷಿಕರ, ಶ್ರಮಿಕರ, ಬಡ ಮಧ್ಯಮ ವರ್ಗದ ಹಾಗೂ ಕೌಶಲ್ಯರಹಿತ ಜನರೇ ಹೆಚ್ಚು ಅವಲಂಬಿತರಾಗಿರುವ ಈ ಕ್ಷೇತ್ರಕ್ಕೆ ಸಾಂವಿಧಾನಿಕ ಮಾನ್ಯತೆಯುಳ್ಳ ತಜ್ಞರ ಸಲಹಾ ಮಂಡಳಿಯನ್ನು ಸ್ಥಾಪಿಸಿ ಸಹಕಾರ ಸಂಬಂಧಗಳನ್ನು ಅಭಿವೃದ್ಧಿಪಡಿಸುವ ಮತ್ತು ಸಹಕಾರ ಚಳವಳಿಯ ಸಮನ್ವಯ ಕಾರ್ಯಾಚರಣೆಗೆ ನೆರವು ನೀಡುವ ಅವಶ್ಯಕತೆಯಿದೆ.

ಈ ನಿಟ್ಟಿನಲ್ಲಿ ಕೇಂದ್ರ ಮಂತ್ರಿಮಂಡಲದಲ್ಲಿ ಸಹಕಾರ ಸಚಿವಾಲಯ ಕ್ಕೊಂದು ಪ್ರತ್ಯೇಕ ಸಚಿವರ ಅವಶ್ಯಕತೆಯಿದೆ. ಮುಂದಿನ ದಿನಗಳಲ್ಲಿ ಕೇಂದ್ರ ಸರಕಾರ ಗಂಭೀರವಾಗಿ ಚಿಂತಿಸುವ ಅವಶ್ಯಕತೆಯಿದೆ. ವಿಧಾನ ಪರಿಷತ್ತಿಗೆ ಶಿಕ್ಷಕರ, ಪದವೀಧರರಿಗೆ, ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾಗಲು ಪ್ರಾತಿನಿಧ್ಯವಿರುವಂತೆ ಸಹಕಾರಿ ಕ್ಷೇತ್ರಕ್ಕೂ ಪ್ರಾತಿನಿಧ್ಯ ಕಲ್ಪಿಸುವ ಅವಶ್ಯಕತೆಯಿದೆ ಅಥವಾ ವಿಧಾನ ಪರಿಷತ್ತಿಗೆ ಹಾಗೂ ರಾಜ್ಯಸಭೆಗೆ ಸಿನಿಮಾ, ಸಂಗೀತ, ಸಾಹಿತ್ಯ ಕ್ಷೇತ್ರದಂತಹ ವಿವಿಧ ಕ್ಷೇತ್ರಗಳಿಗೆ ನುರಿತ ತಜ್ಞರು, ಪರಿಣಿತರನ್ನು ನಾಮನಿರ್ದೇಶನ ಮಾಡುವಂತೆ ಸಹಕಾರಿ ಕ್ಷೇತ್ರದಿಂದಲೂ ನಾಮ ನಿರ್ದೇಶನಕ್ಕೆ ಪ್ರಾಮುಖ್ಯ ನೀಡಿದಲ್ಲಿ ಸಹಕಾರಿ ಕ್ಷೇತ್ರದ ಅನೇಕ ಸಮಸ್ಯೆಗಳಿಗೆ ಉತ್ತರ, ಭವಿಷ್ಯದಲ್ಲಿ ಕ್ಷೇತ್ರವನ್ನು ಮತ್ತಷ್ಟು ಸದೃಢಗೊಳಿಸಲು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ಧನಾತ್ಮಕವಾಗಿ ಚಿಂತಿಸಬೇಕಿದೆ.

**– (ಲೇಖಕರು ಅಧ್ಯಕ್ಷರು,**


**ಶ್ರೀ ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕ್ ಲಿ.) ಬೆಂಗಳೂರು.**

# ಸಹಕಾರ ಸಂಘದ ಮುಖ್ಯಕಾರ್ಯನಿರ್ವಾಹಕನ ಅಧಿಕಾರಗಳು ಮತ್ತು ಪ್ರಕಾರ್ಯಗಳು

▸▸ **ಹೆಚ್.ಎಸ್. ನಾಗರಾಜಯ್ಯ** ಕೆ.ಸಿ.ಎಸ್., ಸಹಕಾರ ಸಂಘಗಳ ಅಪರ ನಿಬಂಧಕರು (ನಿವೃತ್ತ), ಬೆಂಗಳೂರು

ಸಹಕಾರ ಸಂಘಗಳ ಕಾಯ್ದೆ 1959 ಕಲಂ 29ಜಿ ಹಾಗೂ ನಿಯಮ 14ಎಎಮ್ ಮತ್ತು ಉಪನಿಯಮಗಳಡಿಯಲ್ಲಿ ಮುಖ್ಯಕಾರ್ಯನಿರ್ವಾಹಕನು ಈ ಕೆಳಗಿನ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಹೊಂದಿರತಕ್ಕದ್ದು.

1. ಪ್ರತಿ ಸಹಕಾರ ಸಂಘಕ್ಕೆ ಒಬ್ಬ ಮುಖ್ಯಕಾರ್ಯನಿರ್ವಾಹಕನು ಇರತಕ್ಕದ್ದು. ಅವನನ್ನು ಸಹಕಾರ ಸಂಘದ ಆಡಳಿತಮಂಡಳಿ ನೇಮಕ ಮಾಡತಕ್ಕದ್ದು. ಕೆಲವು ಸಂದರ್ಭಗಳಲ್ಲಿ ಇಲಾಖೆ / ಸರ್ಕಾರ ನೇಮಿಸುವ ಅಧಿಕಾರವಿರುತ್ತದೆ.
2. ಮುಖ್ಯಕಾರ್ಯನಿರ್ವಾಹಕನು ಸಂಘದ ಮುಖ್ಯ ಆಡಳಿತಾಧಿಕಾರಿ ಯಾಗಿರತಕ್ಕದ್ದು ಮತ್ತು ಆಡಳಿತ ಮಂಡಳಿಯ ಸಾಮಾನ್ಯ ಮೇಲ್ವಿಚಾರಣಾ ಹಾಗೂ ನಿಯಂತ್ರಣಕ್ಕೆ ಒಳಪಟ್ಟಿರುತ್ತಾನೆ.
3. ಸಂಘದ ಎಲ್ಲಾ ನೌಕರರ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಜವಾಬ್ದಾರನಾಗಿರತಕ್ಕದ್ದು ಮತ್ತು ಸಂಘದ ದಿನನಿತ್ಯದ ನಿರ್ವಹಣೆ ಮತ್ತು ವ್ಯವಹಾರಕ್ಕೆ ಜವಾಬ್ದಾರನಾಗಿರತಕ್ಕದ್ದು.
4. ಸಂಘದ ಅಧಿಕೃತ ಮತ್ತು ಸಾಮಾನ್ಯ ವ್ಯವಹಾರಗಳನ್ನು ನಡೆಸತಕ್ಕದ್ದು.
5. ರಾಜ್ಯ ಸರ್ಕಾರಕ್ಕೆ ಬಾಕಿ ಇರುವ ಮತ್ತು ಸರ್ಕಾರದ ಖಾತರಿಯ ಮೇಲೆ ಪಡೆದ ಸಾಲಗಳ ಮತ್ತುಇತರ ಸಾಲಗಳ ಮರುಪಾವತಿಗೆ ವ್ಯವಸ್ಥೆ ಮಾಡತಕ್ಕದ್ದು ಮತ್ತು ಇದರ ಸಂಬಂಧದಲ್ಲಿ ವರದಿಯನ್ನು ರಿಜಿಸ್ಟ್ರಾರ್‌ರವರಿಗೆ ಸಲ್ಲಿಸುವುದು.
6. ಉಪವಿಧಿಗಳ ಅನುಸಾರವಾಗಿ ಬ್ಯಾಂಕಿನ ಲೆಕ್ಕಗಳನ್ನು ನಿರ್ವಹಿಸಲು ಜವಾಬ್ದಾರರಾಗುವುದು ಮತ್ತು ನಿಗದಿತ ಸುರಕ್ಷಿತ ಅಭಿರಕ್ಷೆಗೆ ವ್ಯವಸ್ಥೆ ಮಾಡತಕ್ಕದ್ದು.
7. ಸಂಘಕ್ಕಾಗಿ ಮತ್ತು ಅದರ ಪರವಾಗಿ ಸಹಕಾರ ಸಂಘದ ಎಲ್ಲಾ ದಸ್ತಾವೇಜುಗಳಿಗೆ ಸಹಿ ಮಾಡತಕ್ಕದ್ದು ಹಾಗೂ ಅನುಪ್ರಮಾಣಿಸತಕ್ಕದ್ದು.
8. ಸಹಕಾರ ಸಂಘದ ಎಲ್ಲಾ ದಾಖಲಾತಿಗಳು ಆಸ್ತಿ, ನಗದು ಹಣ ಮತ್ತು ದಸ್ತಾವೇಜುಗಳ ಅಭಿರಕ್ಷಕನಾಗಿರತಕ್ಕದ್ದು ಮತ್ತು ಸೂಕ್ತ ನಿರ್ವಹಣೆ ಮಾಡತಕ್ಕದ್ದು.
9. ಬ್ಯಾಂಕ್ ವ್ಯವಹಾರವನ್ನು ಉಪನಿಯಮ ಹಾಗೂ ಮಂಡಳಿ ತೀರ್ಮಾನ ರೀತ್ಯಾ ವೈಯಕ್ತಿಕ ಅಥವಾ ಜಂಟಿ ಸಹಿಯೊಂದಿಗೆ ನಿರ್ವಹಿಸುವುದು.
10. ಸಹಕಾರ ಸಂಘದ ದೈನಂದಿನ ಪತ್ರ ವ್ಯವಹಾರವನ್ನು ನಿರ್ವಹಿಸುವುದು.
11. ಸಹಕಾರ ಸಂಘಗಳ ನಿಯಮ 1960 ನಿಯಮ ಸಂಖ್ಯೆ 6(4) ರನ್ವಯ 60 ದಿವಸದೊಳಗಾಗಿ ಬೈಲಾ ತಿದ್ದುಪಡಿ ಪ್ರಸ್ತಾವನೆಯನ್ನು ಇಲಾಖೆಯ ಸಕ್ಷಮ ಪ್ರಾಧಿಕಾರಕ್ಕೆ ಅನುಮೋದನೆಗೆ ಸಲ್ಲಿಸುವುದು.
12. ಸಹಕಾರ ಸಂಘಗಳ ಕಾಯ್ದೆ 1959 ಕಲಂ 39 ಎಎ(15) ರೀತ್ಯಾ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಚುನಾವಣೆ ಪ್ರಕ್ರಿಯೆಗೆ ಎಲ್ಲಾ ತರಹದ ದಾಖಲಾತಿ ಏರ್ಪಾಡು ಮತ್ತು ಸಹಕಾರ ನೀಡುವುದು.
13. ಸಹಕಾರ ಸಂಘಗಳ ನಿಯಮ 1960, ನಿಯಮ 13ಎ ರೀತ್ಯಾ ಸದಸ್ಯರಿಗೆ ಗುರುತಿನ ಕಾರ್ಡನ್ನು ವಿತರಿಸುವುದು ಮುಖ್ಯಕಾರ್ಯನಿರ್ವಾಹಕನ ಆಧ್ಯ ಕರ್ತವ್ಯವಾಗಿದೆ.



14. ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 27ಬಿ ರೀತ್ಯಾ ಸಹಕಾರ ವರ್ಷ ಮುಕ್ತಾಯವಾದ 6 ತಿಂಗಳೊಳಗಾಗಿ ಅಂದರೆ ಸೆಪ್ಟಂಬರ್ 30ರೊಳಗೆ ನಿಗದಿಪಡಿಸಿದ ವಿದ್ಯುಕ್ತ ತಃಖ್ತೆಗಳನ್ನು (Reports) ಸಕ್ಷಮ ನಿಬಂಧಕರಿಗೆ ಸಲ್ಲಿಸುವುದು ಕಡ್ಡಾಯವಾಗಿದೆ. ತಪ್ಪಿದ್ದಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ.
15. ಸಹಕಾರ ಸಂಘಗಳ ನಿಯಮ 1960 ನಿಯಮ 14 ಎಎಫ್ ಮತ್ತು 14 ಎಜಿ ರೀತ್ಯಾ ನಿರ್ದೇಶಕರ ಹಾಗೂ ಪದಾಧಿಕಾರಿಗಳ ಆಕಸ್ಮಿಕ ಖಾಲಿ ಬಿದ್ದ ಸ್ಥಾನಗಳ ಬಗ್ಗೆ ಖಾಲಿ ಬಿದ್ದ ಏಳು ದಿವಸದೊಳಗಾಗಿ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸುವುದು.
16. ಪ್ರತಿ ಸಹಕಾರ ವರ್ಷ ಮುಕ್ತಾಯವಾದಒಂದು ತಿಂಗಳೊಳಗಾಗಿ ಸದಸ್ಯರ ಪಟ್ಟಿ ತಯಾರಿಸಿ ಪ್ರಕಟಿಸುವುದು.
17. ಸಹಕಾರ ಸಂಘದ ಚುನಾವಣಾ ವರ್ಷದಲ್ಲಿ ಸಹಕಾರ ಕಾಯ್ದೆ, ನಿಯಮ ಮತ್ತು ಬೈಲಾ ರೀತ್ಯಾಕರಡು ಮತದಾರರ ಪಟ್ಟಿ ತಯಾರಿಸಿ, ಚುನಾವಣಾ ಪ್ರಾಧಿಕಾರದಿಂದ ನಿಯೋಜಿತ ಅಧಿಕಾರಿಯ ಪರಿಶೀಲನೆಗೆ ಸಲ್ಲಿಸತಕ್ಕದ್ದು.
18. ಸಹಕಾರ ಸಂಘಗಳ ನಿಯಮ 1960 ನಿಯಮ 14 ಎಕೆಕೆ (2) ರೀತ್ಯಾ ಪದಾಧಿಕಾರಿಗಳ ವಿರುದ್ದ ಅವಿಶ್ವಾಸ ನೋಟೀಸ್ ಸ್ವೀಕರಿಸಿದ ಏಳ ದಿವಸದೊಳಗಾಗಿ ಇಲಾಖಾ ಸಕ್ಷಮ ನಿಬಂಧಕರಿಗೆ ವರದಿ ಸಲ್ಲಿಸುವುದು ಕಡ್ಡಾಯವಾಗಿದೆ.



**ಸಹಕಾರ ಸಂಘದ ಯಾವುದೇ ನಿರ್ದೇಶಕರು ಕಾಯ್ದೆಯ, ನಿಯಮ ಮತ್ತು ಉಪವಿಧಿಗಳ ಅಡಿಯಲ್ಲಿ ತನ್ನ ಪದದಲ್ಲಿ ಮುಂದುವರೆಯಲು ಅನರ್ಹನಾದರೆ ಅದನ್ನು ಸಂಬಂಧಪಟ್ಟ ರಿಜಿಸ್ಟ್ರಾರರಿಗೆ 30 ದಿನಗಳೊಳಗಾಗಿ ವರದಿ ಮಾಡತಕ್ಕದ್ದು.**

19. ಸಹಕಾರ ಸಂಘಗಳ ಕಾಯ್ದೆ ಕಲಂ 63, 64, ಮತ್ತು 65ರಡಿಯಲ್ಲಿ ಆಡಿಟ್, ವಿಚಾರಣೆ ಮತ್ತು ಪರಿವೀಕ್ಷಣಾಧಿಕಾರಿಗಳಿಗೆ ದಾಖಲಾತಿ, ಪುಸ್ತಕ, ಹೇಳಿಕೆ ಹಾಗೂ ಎಲ್ಲ ರೀತಿಯ ಸಹಕಾರ ನೀಡುವುದು ಕಡ್ಡಾಯವಾಗಿದೆ.
20. ಅಧ್ಯಕ್ಷರೊಡನೆ ಸಮಾಲೋಚಿಸಿ, ಆಡಳಿತಮಂಡಳಿ ಸಭೆ, ಉಪಸಮಿತಿ ಸಭೆ ಕರೆಯುವುದು ಹಾಗೂ ವಾರ್ಷಿಕ ಮತ್ತು ವಿಶೇಷ ವಾರ್ಷಿಕ ಸಭೆಗಳನ್ನು ಕರೆಯಲು ಆಡಳಿತಮಂಡಳಿಗೆ ಮಂಡಿಸುವುದು ಮತ್ತು ನೋಟೀಸ್ ನೀಡುವುದು ಮುಖ್ಯಕಾರ್ಯ ನಿರ್ವಾಹಕನ ಜವಾಬ್ದಾರಿಯಾಗಿದೆ.
21. ಕಾರ್ಯನೀತಿಗಳು, ಗುರಿಗಳು ಮತ್ತು ಯೋಜನೆಯನ್ನು ರೂಪಿಸುವಿಕೆಯಲ್ಲಿ ಮಂಡಳಿಗೆ ನೆರವು ನೀಡತಕ್ಕದ್ದು.
22. ಮಂಡಳಿಗೆ ಅಗತ್ಯವಾದ ಮಾಹಿತಿ ಒದಗಿಸುವುದು ಮತ್ತು ಸಂಘದ ಪ್ರಕಾರ್ಯಗಳ ಮತ್ತು ಕಾರ್ಯಾಚರಣೆಗಳ ಬಗ್ಗೆ ಶೃತಪಡಿಸತಕ್ಕದ್ದು.
23. ಸಹಕಾರ ಸಂಘದ ಪರವಾಗಿ ದಾವೆ ಹೂಡತಕ್ಕದ್ದು ಮತ್ತು ದಾವೆಗೆ ಗುರಿಯಾಗತಕ್ಕದ್ದು.
24. ಮುಖ್ಯಕಾರ್ಯನಿರ್ವಾಹಕನು ಸಂಘದ ಮತ್ತು ಅದರ ಮಂಡಳಿಯ ಪ್ರತಿಯೊಂದು ಸಭೆಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಪಾಲ್ಗೊಳ್ಳಲು ಹಾಗೂ ಯಾವುದೇ ಗೊತ್ತುವಳಿ ಮಂಡಿಸಲು ಹಕ್ಕುಳ್ಳವನಾಗಿರತಕ್ಕದ್ದು.
25. ಮುಖ್ಯಕಾರ್ಯನಿರ್ವಾಹಕನು ಆಡಳಿತಮಂಡಳಿಯ ಸದಸ್ಯನಾಗಿರತಕ್ಕದ್ದು. ಆದರೆ ಚುನಾವಣೆಯಲ್ಲಿ ಮತ ನೀಡುವ ಹಕ್ಕು ಹೊಂದಿರತಕ್ಕದ್ದಲ್ಲ.
26. ಪ್ರಾಥಮಿಕ ಸಹಕಾರ ಸಂಘಗಳ ಸಂಬಂಧದಲ್ಲಿ ಮುಖ್ಯಕಾರ್ಯ ನಿರ್ವಾಹಕನು ಅವನಿಂದ ಅಧಿಕೃತವಾಗಿ ದೃಢೀಕರಿಸಿದ ಜಮಾ ಮತ್ತು ಖರ್ಚು ಲೆಕ್ಕದ ಪ್ರತಿಯನ್ನು ಪ್ರತಿ ತಿಂಗಳು ರಿಜಿಸ್ಟ್ರಾರ್‌ರವರಿಗೆ ಮತ್ತು ಹಣಕಾಸು ಬ್ಯಾಂಕಿಗೆ ತಿಂಗಳ ಹದಿನೈದು ದಿನಗಳೊಳಗಾಗಿ ಕಳುಹಿಸತಕ್ಕದ್ದು. ವಾರ್ಷಿಕ ಸಭೆ ಮತ್ತು ಆಡಳಿತಮಂಡಳಿ ಸಭೆಗಳ ಠರಾವನ್ನು ಅಂತಹ ಸಭೆಗಳ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ರಿಜಿಸ್ಟ್ರಾರ್‌ರವರಿಗೆ ಮತ್ತು ಹಣಕಾಸು ಬ್ಯಾಂಕಿಗೆ ಕಳುಹಿಸತಕ್ಕದ್ದು. ಸಹಕಾರ ಕಾಯ್ದೆ 1959ರ ಕಲಂ 29ಜಿ(6) ರೀತ್ಯಾ ಕಡ್ಡಾಯವಾಗಿದೆ. ತಪ್ಪಿದಲ್ಲಿ ಶಿಕ್ಷಾರ್ಹ ಅಪರಾಧವಾಗುತ್ತದೆ
27. ಸಹಕಾರ ಸಂಘದ ದೈನಂದಿನ ವ್ಯವಹಾರದ ನಿರ್ವಹಣೆ, ಸಾಮಾನ್ಯ ಮೇಲ್ವಿಚಾರಣೆ, ನಿಯಂತ್ರಣ ಮತ್ತು ವ್ಯವಸ್ಥಾಪನೆಗೆ ಜವಾಬ್ದಾರನಾಗಿರತಕ್ಕದ್ದು.
28. ಅಜೆಂಡಾ ಮತ್ತು ಅದರಲ್ಲಿನ ಪ್ರತಿಯೊಂದು ವಿಷಯದಲ್ಲಿನ ಟಿಪ್ಪಣಿ ಸಹಿತ ಸಾಮಾನ್ಯ ಸಭೆ, ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳಿಗೆ ನೋಟೀಸ್ ನೀಡತಕ್ಕದ್ದು.
29. ಸಾಮಾನ್ಯ ನಿಕಾಯದ, ಮಂಡಳಿಯ ಮತ್ತು ಉಪಸಮಿತಿಗಳ ಸಭೆಗಳಲ್ಲಿ ಹಾಜರಿದ್ದು ಸದರಿ ಸಭೆಗಳಲ್ಲಿ ಅಗತ್ಯ ಪಡಿಸುವ ಕಾಗದ ಪತ್ರಗಳನ್ನು ಹಾಜರುಪಡಿಸತಕ್ಕದ್ದು ಮತ್ತು ಸಭಾಪತಿಯೊಡನೆ ಅಂತಹ ಸಭೆಗಳ ನಡವಳಿಕೆಗಳಿಗೆ ಸಹಿ ಮಾಡತಕ್ಕದ್ದು.
30. ಸಹಕಾರ ಸಂಘಗಳ ಕಾಯ್ದೆಯ ಕಲಂ.63ರ, ಕಲಂ.64ರ ಮತ್ತು ಕಲಂ 65ರ ವರದಿಗಳಿದ್ದಲ್ಲಿ ಅವುಗಳಿಗೆ ಯುಕ್ತವಾದ ಲೋಪದೋಷಗಳನ್ನು ಸರಿಪಡಿಸಲು ಅಥವಾ ಅಕ್ರಮಗಳನ್ನು ಸರಿಪಡಿಸಲು ತೆಗೆದುಕೊಳ್ಳಬಹುದಾದ ಕ್ರಮಗಳ ಸಹಿತ ಮಂಡಳಿಯ ಮುಂದೆ ಮಂಡಿಸತಕ್ಕದ್ದು ಹಾಗೂ ಅನುಪಾಲನಾ ವರದಿಗಳನ್ನು ರಿಜಿಸ್ಟ್ರಾರ್‌ರವರಿಗೆ ಸಲ್ಲಿಸತಕ್ಕದ್ದು.
31. ಸಹಕಾರ ಸಂಘದ ಯಾವುದೇ ನಿರ್ದೇಶಕರು ಕಾಯ್ದೆಯ, ನಿಯಮ ಮತ್ತು ಉಪವಿಧಿಗಳ ಅಡಿಯಲ್ಲಿ ತನ್ನ ಪದದಲ್ಲಿ ಮುಂದುವರೆಯಲು ಅನರ್ಹನಾದರೆ ಅದನ್ನು ಸಂಬಂಧಪಟ್ಟ ರಿಜಿಸ್ಟ್ರಾರರಿಗೆ 30 ದಿನಗಳೊಳಗಾಗಿ ವರದಿ ಮಾಡತಕ್ಕದ್ದು.
32. ಸಹಕಾರ ಸಂಘದ ಸಾಮಾನ್ಯ ನಿಕಾಯ, ವಿಶೇಷ ಮಹಾಸಭೆ ಆಡಳಿತಮಂಡಳಿ ಮತ್ತು ಉಪಸಮಿತಿಗಳ ತೀರ್ಮಾನಗಳನ್ನು ಸಕಾಲದಲ್ಲಿ ಜಾರಿಗೊಳಿಸುವುದು ಮುಖ್ಯಕಾರ್ಯನಿರ್ವಾಹಕನ ಕರ್ತವ್ಯವಾಗಿದೆ.
33. ಅಧಿನಿಯಮದ, ನಿಯಮಗಳ ಅಥವಾ ಉಪವಿಧಿಗಳ ಮೇರೆಗೆ ಅವನಿಗೆ ವಿಧಿಸಿದ ಅಥವಾ ಅವನಿಗೆ ಪ್ರಧಾನ ಮಾಡಿದಂತ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಅಧಿಕಾರಗಳನ್ನು ಚಲಾಯಿಸತಕ್ಕದ್ದು.
34. ಸಿಬ್ಬಂದಿಗಳಿಗೆ ರಜೆ ಮಂಜೂರಾತಿ ವಾರ್ಷಿಕ ಬಡ್ತಿ ಮಂಜೂರು ಹಾಗೂ ಶಿಸ್ತು ಕ್ರಮಕ್ಕೆ ಆಡಳಿತಮಂಡಳಿಗೆ ಮಂಡಿಸತಕ್ಕದ್ದು.

# ಚೆಕ್ಕುಗಳ ಮೂಲಕ ಪಾವತಿಗೆ ನೂತನ ನಿಯಮ

ನಮ್ಮ ದೇಶದ ರಾಷ್ಟ್ರೀಯ ಬ್ಯಾಂಕು (ಆರ್‌ಬಿಐ) 2021ರ ಜನವರಿ 1ರಿಂದ ಚೆಕ್ ಮೂಲಕ ಪಾವತಿಗೆ ಹೊಸ ನಿಯಮಗಳನ್ನು ಜಾರಿಗೊಳಿಸಿದೆ. ಎರಡು ತಿಂಗಳ ಹಿಂದೆ ಚೆಕ್‌ಗಾಗಿ "ಸಕಾರಾತ್ಮಕ ಪಾವತಿ ಪದ್ದತಿ" ಜಾರಿಗೆ ತರಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಪ್ರಸ್ತಾಪಿಸಿತ್ತು. ಕೇಂದ್ರ ಸರ್ಕಾರದ ಅನುಮೋದನೆ ದೊರೆತ ನಂತರ ಅದನ್ನು 2021ರ ಜನವರಿ 1ರಿಂದ ಜಾರಿಗೆ ತರಲಾಗಿದೆ.

ಸಕಾರಾತ್ಮಕ ಪಾವತಿಯ ಪದ್ದತಿ ಎಂಬ ಪರಿಕಲ್ಪನೆಯ ಹಿನ್ನೆಲೆಯಲ್ಲಿ ಹೆಚ್ಚು ಮೌಲ್ಯದ ಚೆಕ್ಕುಗಳ ಪ್ರಮುಖ ವಿವರಗಳನ್ನು ಮರುದೃಢೀಕರಿಸುವ ಪ್ರಕ್ರಿಯೆ ಇದಾಗಿರುತ್ತದೆ.

ಹೊಸನಿಯಮದ ಪ್ರಕಾರ ಇನ್ನು ಮುಂದೆ ರೂ.50,000/-ಕ್ಕಿಂತ ಹೆಚ್ಚಿನ ಹಣವನ್ನು ಚೆಕ್ ಮೂಲಕ ಪಾವತಿಸುವಾಗ ಬ್ಯಾಂಕುಗಳು ಪಾವತಿಗೆ ಸಂಬಂಧಿಸಿದ ಕೆಲವು ಪ್ರಮುಖ ವಿವರಗಳನ್ನು ಮರು-ದೃಢೀಕರಣ ಮಾಡಿಕೊಳ್ಳಬೇಕಿರುತ್ತದೆ. ಗ್ರಾಹಕರ ಖಾತೆಯ ವಿವರಗಳ ಮತ್ತು ಅವರ ಹಣದ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಚೆಕ್ ಮೂಲಕ ಪಾವತಿಗೆ ಸಂಬಂಧಿಸಿದಂತೆ ವಂಚನೆ ಮತ್ತು ದುರುಪಯೋಗ ಪ್ರಕರಣಗಳನ್ನು ಕಡಿಮೆ ಮಾಡುವ ಉದ್ದೇಶದಿಂದ ಈ ಹೊಸ ನಿಯಮವನ್ನು ಜಾರಿಗೆ ತರಲಾಗಿದೆ ಎಂಬುದು ಆರ್.ಬಿ.ಐ ಗೌವರ್ನರ್ ಶಕ್ತಿಕಾಂತ ದಾಸ್ ಅವರ ಸ್ಪಷ್ಟನೆ.

**ಏನಿದು ಸಕಾರಾತ್ಮಕ ಪಾವತಿ ವ್ಯವಸ್ಥೆ? :** ಪಾಸಿಟೀವ್ ಪೇ ಎಂಬುದು ಮೂಲಭೂತವಾಗಿ ಸ್ವಯಂಚಾಲಿತ ವಂಚನೆ ಪತ್ತೆ ವ್ಯವಸ್ಥೆಯಾಗಿದೆ. ಚೆಕ್ ಸಂಖ್ಯೆ, ಚೆಕ್ ದಿನಾಂಕ, ಪಾವತಿದಾರನ ಹೆಸರು, ಖಾತೆ ಸಂಖ್ಯೆ, ಮೊತ್ತ ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದಂತೆ ಚೆಕ್ ನೀಡಿದವರೊಂದಿಗೆ ಮರು ದೃಢೀಕರಿಸಿಕೊಳ್ಳುವ ಈ ಪ್ರಕ್ರಿಯೆಯಿಂದಾಗಿ ವಂಚನೆ ಪ್ರಕರಣಗಳನ್ನು ನಿವಾರಿಸಬಹುದು. ಇದರಿಂದಾಗಿ ಗ್ರಾಹಕರು ಮೋಸ ಹೋಗುವ ಮತ್ತು ಅದರಿಂದಾಗಿ ಬ್ಯಾಂಕುಗಳ ವಿರುದ್ದ ದಾಖಲಾಗುವ ದೂರು ವ್ಯಾಜ್ಯಗಳನ್ನು ಕಡಿಮೆ ಮಾಡಬಹುದು.

ಇನ್ನು ಮುಂದಿನ ದಿನಗಳಲ್ಲಿ ಚೆಕ್ ಪಾವತಿಗಾಗಿ ಆರ್.ಬಿ.ಐ ರೂಪಿಸಿರುವ ಹೊಸ ನಿಯಮಗಳು ಈ ಕೆಳಕಂಡಂತಿವೆ.

1. ಪಾಸಿಟೀವ್ ಪೇ ಪರಿಕಲ್ಪನೆಯ ದೊಡ್ಡ ಮೌಲ್ಯದ ಚೆಕ್ಕುಗಳ ಪ್ರಮುಖ ವಿವರಗಳನ್ನು ಮರುದೃಢೀಕರಿಸುವ ಪ್ರಕ್ರಿಯೆಯಾಗಿರುತ್ತದೆ.
2. ಈ ಪ್ರಕ್ರಿಯೆಯಲ್ಲಿ ಚೆಕ್ಕನ್ನು ವಿತರಿಸುವವರು ವಿದ್ಯುನ್ಮಾನವಾಗಿ (ಅಂದರೆ ಎಸ್.ಎಂ.ಎಸ್, ಮೊಬೈಲ್ ಆ್ಯಪ್, ಇಂಟರ್‌ನೆಟ್ ಬ್ಯಾಂಕಿಂಗ್, ಎಟಿಎಂ ಇತ್ಯಾದಿಗಳ ಮೂಲಕ) ಆ ಚೆಕ್‌ನ ಕೆಲವು ಕನಿಷ್ಠ ವಿವರಗಳನ್ನು (ಉದಾಹರಣೆಗೆ, ಫಲಾನುಭವಿಯ ಹೆಸರು / ಪಾವತಿ ಮೊತ್ತ ಇತ್ಯಾದಿ) ಡ್ರಾಯಿ ಬ್ಯಾಂಕಿಗೆ ತಿಳಿಸಿದಲ್ಲಿ ಸದರಿ ಡ್ರಾಯಿ ಬ್ಯಾಂಕು ಪೇಯೀ ಬ್ಯಾಂಕಿಗೆ ಚೆಕ್ ಕಳುಹಿಸುವಾಗಲೇ



ಸಲ್ಲಿಸಲಾಗುತ್ತದೆ. ಯಾವುದೇ ವ್ಯತ್ಯಾಸವನ್ನು ಸಿಟಿಎಸ್‌ನಿಂದ ಡ್ರಾಯಿ ಬ್ಯಾಂಕ್ ಮತ್ತು ಪ್ರಸ್ತುತ ಪಡಿಸುವ ಬ್ಯಾಂಕಿಗೆ ತಿಳಿಸಲಾಗುತ್ತದೆ. ಕೂಡಲೇ ಅವರು ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ.
3. ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಅಪ್ ಇಂಡಿಯಾ (ಎನ್‌ಪಿಸಿಐ) ಇದು ಸಿಟಿಎಸ್‌ನಲ್ಲಿ ಈ ಸಕಾರಾತ್ಮಕ ಪಾವತಿ ಸೌಲಭ್ಯಕ್ಕೆ ಅವಶ್ಯವಿರುವ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು ಮತ್ತು ಅದನ್ನು ಎಲ್ಲಾ ಬ್ಯಾಂಕುಗಳಿಗೆ ಲಭ್ಯವಾಗುವಂತೆ ಮಾಡಬೇಕು. ಅದನ್ನು ಎಲ್ಲಾ ಬ್ಯಾಂಕುಗಳೂ ರೂ.50,000 ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತಗಳಿಗೆ ಚೆಕ್‌ಗಳನ್ನು ವಿತರಿಸುವ ಎಲ್ಲಾ ಖಾತೆದಾರರಿಗೂ ಸಕ್ರಿಯಗೊಳಿಸತಕ್ಕದ್ದು.
4. ಈ ಸೌಲಭ್ಯವನ್ನು ಅಳವಡಿಸುವ ಬ್ಯಾಂಕುಗಳು ಇದರ ಪ್ರಯೋಜನವನ್ನು ಪಡೆಯುವ ಖಾತೆದಾರನ ವಿವೇಚನೆಗೆ ಒಳಪಟ್ಟು ರೂ.5,00,000 ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಚೆಕ್ಕುಗಳನ್ನು ನೀಡುವಾಗ ಅದನ್ನು ಕಡ್ಡಾಯಗೊಳಿಸುವುದನ್ನು ಪರಿಗಣಿಸಬಹುದು.
5. ಇನ್ನು ಮುಂದೆ ಮೇಲಿನ ಸೂಚನೆಗಳಿಗೆ ಅನುಗುಣವಾಗಿರುವ ಚೆಕ್ಕುಗಳನ್ನು ಮಾತ್ರ ಸಿಟಿಎಸ್ ಗ್ರಿಡ್‌ಗಳಲ್ಲಿ ವಿವಾದ ಪರಿಹಾರ ಕಾರ್ಯವಿಧಾನದ ಅಡಿಯಲ್ಲಿ ಸ್ವೀಕರಿಸಲಾಗುತ್ತದೆ. ಸದಸ್ಯ ಬ್ಯಾಂಕುಗಳು ಸಿಟಿಎಸ್ ವ್ಯವಸ್ಥೆಗೆ ಹೊರತಾದ ಕ್ಲಿಯರಿಂಗ್ ಗಾಗಿ ಬರುವ ಚೆಕ್ ಗಳಿಗೂ ಇದೇ ರೀತಿಯ ವ್ಯವಸ್ಥೆಯನ್ನು ಜಾರಿಗೊಳಿಸಬಹುದು.

ಎಲ್ಲ ಬ್ಯಾಂಕುಗಳ ಈ ನೂತನ ಪದ್ಧತಿಯ ವೈಶಿಷ್ಟ್ಯಗಳು ಮತ್ತು ವ್ಯವಸ್ಥೆ ಬಗ್ಗೆ ತಮ್ಮ ಎಲ್ಲಾ ಗ್ರಾಹಕರಿಗೂ ಶಾಖೆಗಳು, ಎಟಿಎಂಗಳಲ್ಲಿ ಮತ್ತು ತಮ್ಮ ವೆಬ್‌ಸೈಟ್ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ವ್ಯವಸ್ಥೆಯ ಮೂಲಕ ಎಸ್.ಎಂ.ಎಸ್ ಅಲರ್ಟ್‌ಗಳ ಮೂಲಕ ಸಾಕಷ್ಟು ಜಾಗೃತಿಯನ್ನು ಮೂಡಿಸಲು ಸೂಚಿಸಲಾಗಿದೆ.

**ಮಾಹಿತಿ ಸಂಗ್ರಹ ಮತ್ತು ಪ್ರಸ್ತುತಿ :**
**ಸನ್ನದು ಲೆಕ್ಕಪರಿಶೋಧಕರು, ಬಿ.ವಿ.ರವೀಂದ್ರನಾಥ್, ಸಾಗರ**

# ವಿಧಾನ ಮಂಡಲ ಜಂಟಿ ಅಧಿವೇಶನ

## ಸಮಗ್ರ ಅಭಿವೃದ್ಧಿಯತ್ತ ಕರ್ನಾಟಕ - ರಾಜ್ಯಪಾಲ ವಜುಭಾಯಿ ವಾಲ



**ಬೆಂಗಳೂರು :** ಕೋವಿಡ್–19 ಸಂಕಷ್ಟದ ನಡುವೆಯೂ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುತ್ತಿದ್ದು, ದೇಶದಲ್ಲೇ ಕರ್ನಾಟಕವನ್ನು ಎಲ್ಲಾ ಕ್ಷೇತ್ರಗಳಲ್ಲೂ ಮೊದಲನೆ ಸ್ಥಾನಕ್ಕೆ ಕೊಂಡೊಯ್ಯಲು ರಾಜ್ಯ ಸರ್ಕಾರ ಪ್ರಮಾಣಿಕ ಪ್ರಯತ್ನ ಮಾಡುತ್ತಿದೆ ಎಂದು ರಾಜ್ಯಪಾಲ ವಿ.ಆರ್.ವಾಲಾ ಅವರು ಸರ್ಕಾರಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.


ವಿಧಾನಸಭೆಯಲ್ಲಿ ಜನವರಿ 28 ರಂದು ಆರಂಭವಾದ ಪ್ರಸಕ್ತ ಸಾಲಿನ ಜಂಟಿ ಅಧಿವೇಶನ ಹಿನ್ನೆಲೆಯಲ್ಲಿ ಮಾತನಾಡಿದ ರಾಜ್ಯಪಾಲರು, ತಮ್ಮ 26 ಪುಟಗಳ ಭಾಷಣದಲ್ಲಿ ಸರ್ಕಾರ ಕೈಗೊಂಡಿರುವ ಯೋಜನೆಗಳು, ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು, ಭವಿಷ್ಯದಲ್ಲಿ ತೆಗೆದುಕೊಳ್ಳಬಹುದಾದ ಹೊಸ ಯೋಜನೆಗಳು, ಕೋವಿಡ್ ನಿಯಂತ್ರಣ, ಮಾದಕ ವಸ್ತುಗಳ ವಿರುದ್ಧ ಸಮರ, ಪ್ರವಾಹ ಪರಿಸ್ಥಿತಿ ನಿರ್ವಹಣೆ ಸೇರಿದಂತೆ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

ಪ್ರತಿಯೊಬ್ಬ ನಾಗರಿಕರೂ ಆನ್‌ಲೈನ್ ಮೂಲಕ ತೆರಿಗೆ ಪಾವತಿಸಲು ಅನುಕೂಲ ಕಲ್ಪಿಸಲಾಗಿದೆ. ಇದರ ಪರಿಣಾಮ ಹಣಕಾಸು ನಿರ್ವಹಣೆ ಶಿಸ್ತಿಗೆ ಒಳಪಡಲಿದೆ. ಈ ಅಧಿವೇಶನದಲ್ಲಿ ಎಲ್ಲಾ ಸದಸ್ಯರು ವಿಮರ್ಶೆ ಮತ್ತು ಚರ್ಚೆಗಳ ಮೂಲಕ ಪ್ರಸ್ತುತ ಸಂಕಷ್ಟಗಳನ್ನು ಎದುರಿಸಲು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಿ ಕರ್ನಾಟಕವನ್ನು ದೇಶದಲ್ಲೇ ಮೊದಲ ಸ್ಥಾನಕ್ಕೆ ಕೊಂಡೊಯ್ಯಲು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಹಾಲು ಉತ್ಪಾದನೆಯಲ್ಲಿ ಕರ್ನಾಟಕ 2ನೇ ಸ್ಥಾನದಲ್ಲಿದೆ. ಕೃಷಿ, ಮೀನುಗಾರಿಕೆ ಉದ್ಯಮಗಳು ಪ್ರಗತಿಯಲ್ಲಿವೆ. ರೈತರ ಉಚಿತ ವಿದ್ಯುತ್ ಪೂರೈಕೆಗೆ 11,250 ಕೋಟಿ ರೂಪಾಯಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 1,132 ಕೋಟಿ ರೂಪಾಯಿ, ಕೃಷಿ, ಸಾಂಸ್ಕೃತಿಕ ಸಂಘಕ್ಕೆ 100 ಕೋಟಿ ಅನುದಾನ, ಹೊಸದಾಗಿ ಸೇರಿದ ಗ್ರಾಮಗಳ ಅಭಿವೃದ್ಧಿಗೆ 1,000 ಕೋಟಿ ರೂಪಾಯಿ ನೀಡಲಾಗಿದೆ ಎಂದು ತಿಳಿಸಿದರು.

ಒಂದು ಲಕ್ಷ ಗೃಹ ನಿರ್ಮಾಣ ಯೋಜನೆಯಡಿ ಮೊದಲ ಹಂತದಲ್ಲಿ 46,499 ಮನೆಗಳ ಪೈಕಿ 31,382 ಮನೆಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿದೆ. ಪ್ರಧಾನಮಂತ್ರಿ ಆವಾಜ್ ಯೋಜನೆಯಡಿ 4,460 ಕೋಟಿ ರೂ. ವೆಚ್ಚದಲ್ಲಿ ಮೂಲ ಸೌಕರ್ಯಗಳೊಂದಿಗೆ 83,119 ಮನೆಗಳ ನಿರ್ಮಾಣಕ್ಕೆ ಅನುಮೋದನೆ ನೀಡಲಾಗಿದೆ.

# ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾಗಿ ಎಚ್.ಕೆ. ಪಾಟೀಲ ಮತ್ತು ಉಪಾಧ್ಯಕ್ಷರಾಗಿ ಬಿ.ಎಸ್. ಪರಮಶಿವಯ್ಯ ಅವಿರೋಧ ಆಯ್ಕೆ



ಶ್ರೀ ಎಚ್.ಕೆ. ಪಾಟೀಲ
ಅಧ್ಯಕ್ಷರು



ಶ್ರೀ ಬಿ.ಎಸ್. ಪರಮಶಿವಯ್ಯ
ಉಪಾಧ್ಯಕ್ಷರು

**ಬೆಂಗಳೂರು :** 2021–2026ನೇ ಸಾಲಿನ ಐದು ವರ್ಷಗಳ ಅವಧಿಗೆ ದಿನಾಂಕ : 22.01.2021ರಂದು ಜರುಗಿದ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಪದಾಧಿಕಾರಿಗಳ ಚುನಾವಣೆಯಲ್ಲಿ ಮಹಾಮಂಡಳದ ಅಧ್ಯಕ್ಷರಾಗಿ ಎಚ್.ಕೆ. ಪಾಟೀಲರವರು ಹಾಗೂ ಉಪಾಧ್ಯಕ್ಷರಾಗಿ ಬಿ.ಎಸ್. ಪರಮಶಿವಯ್ಯ ರವರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ.

ಕರ್ನಾಟಕ ರಾಜ್ಯದ ಎಲ್ಲಾ ಪಟ್ಟಣ ಸಹಕಾರ ಬ್ಯಾಂಕುಗಳು ಮತ್ತು ಹಿರಿಯ ಸಹಕಾರಿಗಳು ತುಂಬು ಹೃದಯದಿಂದ ಅವರುಗಳನ್ನು ಅಭಿನಂದಿಸಿದ್ದಾರೆ.

ಮಹಾಮಂಡಳದ ಆಡಳಿತ ಮಂಡಳಿ ನಿರ್ದೇಶಕರುಗಳಾಗಿ ಡಿ.ಟಿ. ಪಾಟೀಲ, ರುದ್ರೇಗೌಡ, ಅಶೋಕ ಮಲ್ಲಪ್ಪ ಮನಗೂಳಿ, ಕೃಷ್ಣ ಹೆಚ್.ಸಿ., ಕೋಗುಂಡಿ ಬಕ್ಕೇಶಪ್ಪ, ಬಸವರಾಜ ಈಶ್ವರಪ್ಪಾ ಕಲ್ಯಾಣ ಶೆಟ್ಟಿ, ಹರೀಶ್ ಆಚಾರ್, ಕೃಷ್ಣಮೂರ್ತಿ ಭಂಡಾರಿ, ರಾಘವ ವಿಷ್ಣು ಬಾಳೇರಿ, ಮಲಕಣ್ಣ ಡಿ. ಪಾಟೀಲ, ರಾಜಕುಮಾರ ಬಸವರಾಜ ಬಾದವಾಡಗಿ, ನಿರಂಜನ್ ಟಿ.ಎಸ್., ವಾಸು ಹೆಚ್., ಡಾ॥ ಎಂ.ಬಿ. ಮಂಜೇಗೌಡ, ಶ್ರೀಮತಿ ಮಲ್ಲಮ್ಮಾ ಶಿ. ಯಾಳವಾರ, ಶ್ರೀಮತಿ ವೀರಮ್ಮ ಪಿ. ರವರುಗಳು ಆಯ್ಕೆಯಾಗಿದ್ದಾರೆ.

# ಸಹಕಾರ ಮಾರ್ಗದರ್ಶಿ : ಆಧುನಿಕ ಸಹಕಾರ ಚಳವಳಿಯ ಉಗಮ

**ಲೇಖನ : ಬಸವೇಗೌಡ, ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.**

... ಹಿಂದಿನ ಸಂಚಿಕೆಯಿಂದ

1) 1919ರಲ್ಲಿ ಸಹಕಾರದ ವಿಷಯವನ್ನು ಪ್ರಾಂತೀಯ ಸರ್ಕಾರಗಳ ವ್ಯಾಪ್ತಿಗೆ ವರ್ಗಾವಣೆ. ಭಾರತ ಸರ್ಕಾರವು 1919ರಲ್ಲಿ ಮಾಂಟೆಗೊ ಚೆಲ್ಮ್ಸ್‌ಫರ್ಡ್ (Monragu Chelms ford) ವರದಿಯನ್ನು ಆಧರಿಸಿ ಸಂವಿಧಾನಿಕ ಸುಧಾರಣೆಗಳನ್ನು ಜಾರಿಗೆ ತಂದಿತು. ಇದರ ಪ್ರಕಾರ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳ ವ್ಯಾಪ್ತಿಯಲ್ಲಿ ಬರುವ ವಿಷಯಗಳನ್ನು ಪ್ರತ್ಯೇಕ ಪಟ್ಟಿ ಮಾಡಿ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್‌ಗೆ ತಿದ್ದುಪಡಿಗಳನ್ನು ಮಾಡಿ ಆಡಳಿತ ಮತ್ತು ಶಾಸನದ ರಚನೆಯಲ್ಲಿ ಸುಧಾರಣೆಗಳನ್ನು ತರಲಾಯಿತು. ಈ ಸುಧಾರಣೆ ಕಾಯಿದೆ ಪ್ರಕಾರ ಸಹಕಾರದ ವಿಷಯವನ್ನು ಹಾಗೂ ಅದರ ನಿಯಂತ್ರಣ ಮತ್ತು ಶಾಸನ ರಚನೆಯ ಅಧಿಕಾರಗಳನ್ನು ಪ್ರಾಂತೀಯ ಸರ್ಕಾರಗಳ ವ್ಯಾಪ್ತಿಗೆ ವರ್ಗಾಯಿಸಲಾಯಿತು. ಇದರ ಪರಿಣಾಮವಾಗಿ ಪ್ರಾಂತೀಯ ಸರ್ಕಾರಗಳು ಸಹಕಾರದ ಬೆಳವಣಿಗೆಗೆ, ಅದರಲ್ಲೂ ಕೃಷಿ ಪತ್ತಿನ ವ್ಯವಸ್ಥೆಯನ್ನು ಬಲಪಡಿಸಲು ಆದ್ಯತೆ ನೀಡಿದವು. ಪ್ರತಿಯೊಂದು ಪ್ರಾಂತೀಯ ಸರ್ಕಾರವು ಸಹಕಾರ ಇಲಾಖೆಯನ್ನು ತೆರೆದು ಬೆಂಬಲ ನೀಡಿದವು. ಅನೇಕ ಪ್ರಾಂತಗಳಲ್ಲಿ ವೇಗವುಳ್ಳ ಪ್ರಗತಿಯಾಯಿತು. ಸಂಘಗಳ ಸಂಖ್ಯೆ ಮತ್ತು ಸದಸ್ಯರ ಸಂಖ್ಯೆ ಮೂರು ಪಟ್ಟು ಹೆಚ್ಚಿತು. ಸರ್ಕಾರದ ಸಿಬ್ಬಂದಿ ಉತ್ಸಾಹದಿಂದ ಕೆಲಸ ಮಾಡಿದರು. ಆದರೆ, ಪ್ರಗತಿಯಲ್ಲಿ ಗುಣಮಟ್ಟವಿರಲಿಲ್ಲ, ಕಾರಣ ಸರ್ಕಾರದ ಸಿಬ್ಬಂದಿ, ಸಂಘದ ಆಡಳಿತ ಮತ್ತು ಸಿಬ್ಬಂದಿ ವರ್ಗಕ್ಕೆ ಸಹಕಾರದ ಬಗ್ಗೆ ಸರಿಯಾದ ಶಿಕ್ಷಣ ಮತ್ತು ಮಾರ್ಗದರ್ಶನ ಇರಲಿಲ್ಲ. ಮತ್ತೊಂದು ಪ್ರಮುಖ ಅಂಶವೆಂದರೆ, ಸಹಕಾರವು ಪ್ರಾಂತೀಯ ಸರ್ಕಾರಗಳ ವ್ಯಾಪ್ತಿಗೆ ಬಂದ ಮೇಲೆ ಅನೇಕ ಪ್ರಾಂತೀಯ ಸರ್ಕಾರಗಳು ಸಹಕಾರದ ಸ್ಥಿತಿಗತಿಯನ್ನು ಅಧ್ಯಯನ ಮಾಡಿ ಅದರ ಅಭಿವೃದ್ಧಿಗೆ ಸೂಕ್ತ ಶಿಫಾರಸ್ಸು ಮಾಡಲು ಸಮಿತಿಗಳನ್ನು ನೇಮಿಸಿದವು. ಈ ಸಮಿತಿಗಳು ಸಹಕಾರ ಸಂಘಗಳಲ್ಲಿನ ಕೊರತೆ, ದೋಷಗಳು ಮತ್ತು ದುರ್ಬಲತೆಗಳನ್ನು ಪರಿಶೀಲಿಸಿ ಅವುಗಳನ್ನು ಸರಿಪಡಿಸಿರುವ ಬಗ್ಗೆ ಶಿಪಾರಸ್ಸುಗಳನ್ನು ಮಾಡಿರುತ್ತವೆ. ಸಹಕಾರ ಶಿಕ್ಷಣ, ಸಂಘಗಳ ರಚನೆ ಮತ್ತು ಆಡಳಿತ, ಲೆಕ್ಕಪರಿಶೋಧನೆ, ತನಿಖೆ, ಹಣಕಾಸು, ಇತ್ಯಾದಿ ವಿಷಯಗಳ ಕುರಿತು ಅಧ್ಯಯನ ಮಾಡಿ ವರದಿ ನೀಡಿರುತ್ತವೆ.

2) 1928ರಲ್ಲಿ ಭಾರತ ಸರ್ಕಾರವು "ದಿ ರಾಯಲ್ ಕಮಿಷನ್ ಆನ್ ಅಗ್ರೀಕಲ್ಚರ್ (The Royal Commission on Agriculture)ನ್ನು ನೇಮಿಸಿರುತ್ತದೆ. ಇದು ಕೃಷಿ, ತೋಟಗಾರಿಕೆ, ಅರಣ್ಯ, ನೀರಾವರಿ, ಶಿಕ್ಷಣ, ಗ್ರಾಮೀಣ ಕೈಗಾರಿಕೆ, ಸಹಕಾರ ಇತ್ಯಾದಿ ಕೃಷಿಕರು ಮತ್ತು ಗ್ರಾಮೀಣ ಅಭಿವೃದ್ಧಿ ಸಂಬಂಧಿತ ವಿಷಯಗಳ ಕುರಿತು ಅಧ್ಯಯನ ನಡೆಸಿ ವರದಿ ನೀಡಿರುತ್ತದೆ. ಸಹಕಾರಕ್ಕೆ ಸಂಬಂಧಿಸಿದಂತೆ ಗ್ರಾಮೀಣ ಪತ್ತನ್ನು ವಿಸ್ತರಿಸ ಬೇಕೆಂದು, ಸಹಕಾರ ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂದು, ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದ ಕೊರತೆಯನ್ನು ಸರಿಪಡಿಸಬೇಕೆಂದು, ನಿಬಂಧಕರ ನೇಮಕಾತಿ ಮತ್ತು ಅನ್ಯ ಸೇವೆಯ ಮೇಲೆ ನಿಯೋಜನೆ, ಭೂ ಅಡಮಾನ ಬ್ಯಾಂಕ್‌ಗಳ ಸ್ಥಾಪನೆ ಮತ್ತು ಡಿಬೆಂಚರ್ ಮೂಲಕ ಬಂಡವಾಳ ಎತ್ತುವಳಿ, ಇತ್ಯಾದಿ ಶಿಫಾರಸ್ಸು ಮಾಡಿರುತ್ತದೆ. 1929ರ ವೇಳೆಗೆಲ್ಲಾ ಅಲ್ಪಾವಧಿ ಮತ್ತು ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳನ್ನು ನೀಡುವ ಎರಡು ಪ್ರತ್ಯೇಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು. "ಸಹಕಾರ ಏನಾದರೂ ವಿಫಲವಾದರೆ, ಗ್ರಾಮೀಣ ಭಾರತದ ಅತ್ಯುತ್ತಮವಾದ ಭರವಸೆಯು ವಿಫಲವಾದಂತೆಯೆ ಸರಿ" (If cooperation fails, there will fail the best hope of Rural India) ಎಂಬುದಾಗಿ ರಾಯಲ್ ಕಮಿಷನ್ ಅಭಿಪ್ರಾಯ ಪಟ್ಟಿರುತ್ತದೆ.

3) 1929ರಲ್ಲಿ ಪ್ರಪಂಚವು ಆರ್ಥಿಕ ಕುಸಿತಕ್ಕೆ (Economic Depreation) ಕ್ಕೆ ಒಳಗಾಯಿತು. ಇದರ ಪರಿಣಾಮ ಸಹಕಾರ ಸಂಸ್ಥೆಗಳ ಮೇಲೂ ಉಂಟಾಯಿತು. ಆರ್ಥಿಕ ಕುಸಿತದಿಂದಾಗಿ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದು ರೈತರ ಆದಾಯ ಕಡಿಮೆಯಾಯಿತು. ಇದರಿಂದಾಗಿ ಸಾಲದ ವಸೂಲಾತಿ ಕಡಿಮೆ ಆಗುತ್ತಾ ಸಂಘಗಳು ನಷ್ಟಕ್ಕೆ ಒಳಗಾದವು. ಅನೇಕ ಕೃಷಿ ಪತ್ತಿನ ಸಂಘಗಳು ಮತ್ತು ಜಿಲ್ಲಾ ಕೇಂದ್ರ ಬ್ಯಾಂಕ್‌ಗಳು ಬಾಗಿಲು ಮುಚ್ಚಿದವು. ಈ ಪರಿಸ್ಥಿತಿ ಮುಂದುವರಿದಾಗ ಪ್ರಾಂತೀಯ ಸರ್ಕಾರಗಳು ಸಂಘಗಳ ಪರಿಸ್ಥಿತಿಯನ್ನು ಸುಧಾರಿಸಲು ಮುಂದಾದವು. ಸಮಿತಿಗಳನ್ನು ರಚಿಸಿ, ಅಧ್ಯಯನ ವರದಿಗಳನ್ನು ಪಡೆದು ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮವಿಡಲಾಯಿತು. ಜಿಲ್ಲಾ ಬ್ಯಾಂಕ್‌ಗಳಿಗೆ ಆರ್ಥಿಕ ನೆರವು, ಉದ್ದೇಶ ಪೂರ್ವಕ ಸುಸ್ಥಿದಾರರ ವಿರುದ್ಧ ಕಡ್ಡಾಯ ವಸೂಲಾತಿ ಕ್ರಮ, ಸಾಲ ಮರುಪಾವತಿಸಿದವರಿಗೆ ಹೊಸ ಸಾಲ, ಇತ್ಯಾದಿ ಕ್ರಮಗಳನ್ನು ಕೈಗೊಳ್ಳಲಾಯಿತು. ಇದರಿಂದಾಗಿ ಸಂಘಗಳು ಚೇತರಿಸಿಕೊಳ್ಳಲಾರಂಭಿಸಿದವು. ಕೃಷಿ ಮಾರಾಟ ಸಹಕಾರ ಸಂಘಗಳು, ಕೃಷಿಯೇತರ ಪತ್ತಿನ ಸಂಘಗಳು, ಹಿನ್ನಡೆ ಅನುಭವಿಸಿದ್ದ ನೇಕಾರರ ಸಂಘಗಳು, ಇತ್ಯಾದಿ ಸಂಘಗಳು ಪ್ರಗತಿ ಸಾಧಿಸಲಾರಂಭಿಸಿದವು.

4) 1935ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ (Reserve Bank of India-RBI) ಸ್ಥಾಪನೆಯು ಪ್ರಮುಖ ಘಟನೆಯಾಗಿರುತ್ತದೆ. ಕೃಷಿ ಪತ್ತು ಮತ್ತು ಸಹಕಾರ ಚಳುವಳಿಗೆ ಬೆಂಬಲ ನೀಡಲು ರಿಸರ್ವ್ ಬ್ಯಾಂಕ್‌ನಲ್ಲಿ ಪ್ರತ್ಯೇಕವಾದ "ಕೃಷಿ ಪತ್ತಿನ ಶಾಖೆ" (Agricultural Credit Department)ಯನ್ನು ಸ್ಥಾಪಿಸಲಾಯಿತು. ಈ ಶಾಖೆಯು ಸಹಕಾರ ಚಳುವಳಿಯ ಬಗ್ಗೆ ಅಧ್ಯಯನ ನಡೆಸಿ ತನ್ನ ಶಾಸನ ಬದ್ಧ ವರದಿಯನ್ನು 1937ರಲ್ಲಿ ನೀಡಿತು. ಆರ್‌ಬಿಐ ಈ ವರದಿಯನ್ನು ಆಧರಿಸಿ ಸಹಕಾರ ಸಂಘಗಳ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸಲು ಮತ್ತು ಕೃಷಿಕರಿಗೆ ಬೇಕಾಗುವ ಸಾಲವು ಸೇರಿದಂತೆ ಇತರೆ ಎಲ್ಲಾ ಅವಶ್ಯಕತೆಗಳನ್ನು ಪೂರೈಸಲು ಕೃಷಿ ಪತ್ತಿನ ಸಂಘಗಳನ್ನು ವಿವಿಧೋದ್ದೇಶ ಸಹಕಾರ ಸಂಘಗಳನ್ನಾಗಿ ಪುನರ್ ಸಂಘಟಿಸಲು ಪ್ರಾಂತೀಯ

ಸರ್ಕಾರಗಳಿಗೆ ಸಲಹೆಗಳನ್ನು ನೀಡಿತು. ಸಹಕಾರ ಚಳುವಳಿಯ ಬೆಳವಣಿಗೆಯಲ್ಲಿ ಆರ್‌ಬಿಐ ಪ್ರಮುಖ ಪಾತ್ರ ವಹಿಸಿರುತ್ತದೆ.

5) 1939ರ ಸೆಪ್ಟಂಬರ್ ತಿಂಗಳಲ್ಲಿ ಎರಡನೇ ಮಹಾಯುದ್ದ ಪ್ರಾರಂಭವಾಯಿತು. ಆಮದು ಕಡಿಮೆಯಾಗಿ ಕೃಷಿ ಪದಾರ್ಥಗಳ ಬೆಲೆಗಳಲ್ಲಿ ಏರಿಕೆಯಾಯಿತು. ಇದರಿಂದ ರೈತರ ಆದಾಯ ಹೆಚ್ಚಿತು. ಇದರ ಪರಿಣಾಮ ಕೃಷಿ ಪತ್ತಿನ ಸಂಘಗಳ ಸಾಲ ವಸೂಲಾತಿಯಲ್ಲಿ ಸುಧಾರಣೆಯಾಗಿ ಸಂಘಗಳ ಆರ್ಥಿಕ ಸ್ಥಿತಿಯು ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿತು. ಗ್ರಾಹಕ ಪದಾರ್ಥಗಳ ಬೆಲೆಯಲ್ಲಿ ಏರಿಕೆಯಾಗಿ ಖಾಸಗಿ ಲಾಭಕೋರರು ದಾಸ್ತಾನು ಮಾಡಿಕೊಂಡು ಕಳ್ಳಪೇಟೆಯಲ್ಲಿ ಮಾರಾಟ ಮಾಡಲು ಆರಂಭಿಸಿದರು. ಇದನ್ನು ತಪ್ಪಿಸಲು ಸರ್ಕಾರವು ಆಹಾರ ಧಾನ್ಯ ನಿಯಂತ್ರಣ ವ್ಯವಸ್ಥೆಯನ್ನು ಜಾರಿಗೆ ತಂದಿತು. ಉತ್ಪಾದಕರಿಂದ ಸಂಗ್ರಹಿಸುವ ಮತ್ತು ವಿತರಣೆ ಮಾಡುವ ಕೆಲಸಗಳನ್ನು ಸಂಘಗಳಿಗೆ ವಹಿಸಿತು. ಕೃಷಿ ಪತ್ತಿನ ಸಂಘಗಳು ದಿನಬಳಕೆ ವಸ್ತುಗಳನ್ನು ಮಾರಾಟ ಮಾಡಲು ಆರಂಭಿಸಿ ವಿವಿದ್ಧೋದ್ದೇಶ ಸಂಘಗಳಾಗಿ ಪರಿವರ್ತನೆಗೊಂಡವು. ಪಡಿತರ ಪದಾರ್ಥಗಳ ವಿತರಣೆಗಾಗಿ ಗ್ರಾಹಕ ಸಹಕಾರ ಸಂಘಗಳು ಸ್ಥಾಪನೆಯಾಗಲಾರಂಭಿಸಿದವು. ಕೃಷಿ ಪತ್ತಿನ ಸಂಘಗಳ ಜೊತೆಗೆ ಗ್ರಾಹಕ, ಮಾರಾಟ, ಕೈಗಾರಿಕೆ ಇತ್ಯಾದಿ ಸಂಘಗಳು ಸ್ಥಾಪನೆಯಾದವು.

**6) ಕೃಷಿ ಹಣಕಾಸು ಉಪಸಮಿತಿ (Agricultural Finance Sub-Committee) :** 1904ರ ಪತ್ತಿನ ಸಹಕಾರ ಸಂಘಗಳ ಕಾಯಿದೆ ಅಂಗೀಕಾರವಾಗಿ ಸುಮಾರು 40 ವರ್ಷಗಳು ಕಳೆದು, ಸಂಘಗಳ ಸ್ಥಾಪನೆಯಲ್ಲಿ ಏರಿಕೆಯಾಗಿದ್ದರೂ ಗ್ರಾಮೀಣ ಜನರ ಸಂಕಷ್ಟ ಮುಂದುವರೆದಿತ್ತು. ಲೇವಾದೇವಿದಾರರು ದುಬಾರಿ ಬಡ್ಡಿ ವಿಧಿಸಿ ಶೋಷಣೆ ಮಾಡುತ್ತಿದ್ದರು. ಸಂಘಗಳ ಗುಣಮಟ್ಟದಲ್ಲಿ ಸುಧಾರಣೆ ಆಗಿರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಜನರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಕೃಷಿ ಮತ್ತು ಹೈನುಗಾರಿಕೆ ಉದ್ದೇಶಕ್ಕಾಗಿ ಒದಗಿಸುವುದರ ಬಗ್ಗೆ ಅಧ್ಯಯನ ಮಾಡಿ ವರದಿ ನೀಡಲು 1944ರಲ್ಲಿ ಪ್ರೊ.ಡಿ.ಆರ್ ಗಾಡ್ಗಿಲ್ ಇವರ ಅಧ್ಯಕ್ಷತೆಯಲ್ಲಿ ಈ ಸಮಿತಿಯನ್ನು ರಚಿಸಿತು. ಈ ಸಮಿತಿಯು ಕೃಷಿಕರ ಸಾಲಗಳನ್ನು ಅವರ ಮರುಪಾವತಿಸುವ ಸಾಮರ್ಥ್ಯವನ್ನು ಆಧರಿಸಿ 20 ವರ್ಷಗಳು ಮೀರದಂತೆ ಕಂತುಗಳನ್ನಾಗಿ ಮಾಡಿ ಹೊಸ ಸಾಲಗಳನ್ನು ಪರಿಶೀಲಿಸಿ ನೀಡಬೇಕೆಂದು ಶಿಫಾರಸ್ಸು ಮಾಡಿತು. ಸಹಕಾರ ಬ್ಯಾಂಕ್‌ಗಳು ಸಾಲಗಳನ್ನು ನೀಡಲು ಸದೃಢವಾಗಿಲ್ಲದ ಕಾರಣ ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಶೇ.50 ಹಾಗೂ ಜಾಯಿಂಟ್ ಸ್ಟಾಕ್ ಬ್ಯಾಂಕುಗಳು ಮತ್ತು ಸಹಕಾರ ಬ್ಯಾಂಕುಗಳು, ಸಂಸ್ಥೆಗಳು ಸೇರಿ ಇನ್ನುಳಿದ ಶೇ. 50ನ್ನು ಷೇರು ಬಂಡವಾಳವನ್ನಾಗಿ ತೊಡಗಿಸಿ ಪ್ರತ್ಯೇಕವಾದ ಅಗ್ರಿಕಲ್ಚರಲ್ ಕ್ರೆಡಿಟ್ ಕಾರ್ಪೋರೇಷನ್‌ನ್ನು ಸ್ಥಾಪಿಸಿ ತಾತ್ಕಾಲಿಕವಾಗಿ ಅದರಿಂದ ರೈತರಿಗೆ ಸಂಘಗಳ ಮೂಲಕ ಸಾಲ ನೀಡಬೇಕೆಂದು ಸಹ ಶಿಫಾರಸ್ಸು ಮಾಡಿತು. ಕೃಷಿ ಪತ್ತಿನ ಸಂಘಗಳನ್ನು ಬಲಗೊಳಿಸದ ನಂತರ ಅವುಗಳ ಮೂಲಕವೇ ಸಾಲ ನೀಡಿಕೆ ಮುಂದುವರಿಸಬಹುದೆಂದು ಹೇಳಿತು. ಕ್ರೆಡಿಟ್ ಕಾರ್ಪೋರೇಷನ್ ಮೂಲಕ ಸಾಲ ನೀಡುವ ಶಿಫಾರಸ್ಸು ಅನುಷ್ಠಾನವಾಗಲಿಲ್ಲ.

**7) ಸಹಕಾರ ಯೋಜನಾ ಸಮಿತಿ (Cooperative Planning Committee) :** ಈ ಸಮಿತಿಯನ್ನು ಭಾರತ ಸರ್ಕಾರವು 1945ರಲ್ಲಿ ಸಹಕಾರ ಅಭಿವೃದ್ಧಿ ಯೋಜನೆಯನ್ನು ಸಿದ್ದಪಡಿಸಲು ಆರ್.ಜಿ.ಸರೈಯ ಇವರ ಅಧ್ಯಕ್ಷತೆಯಲ್ಲಿ ನೇಮಿಸಿತು. ಇದನ್ನು ಸರೈಯ ಸಮಿತಿ ಎಂದು ಸಹ ಕರೆಯಲಾಗುತ್ತದೆ. ಈ ಸಮಿತಿಯು 1946 ರಲ್ಲಿ ವರದಿಯನ್ನು ಸಲ್ಲಿಸಿತು. ವರದಿಯಲ್ಲಿ ಸರ್ಕಾರದ ತಾಟಸ್ಥ್ಯ ಧೋರಣೆ, ಅನಕ್ಷರತೆ, ಪ್ರಾಥಮಿಕ ಸಂಘಗಳ ಚಿಕ್ಕ ಗಾತ್ರ, ಗೌರವ ಸೇವೆಯ ಮೇಲಿನ ಅವಲಂಬನೆ, ಆಡಳಿತದಲ್ಲಿ ಅದಕ್ಷತೆ, ಶಿಕ್ಷಣ ಕೊರತೆ, ಇತ್ಯಾದಿ ಸಹಕಾರದ ಹಿನ್ನಡೆ ಮತ್ತು ಗುಣಮಟ್ಟ ರಹಿತ ಪರಿಸ್ಥಿತಿಗೆ ಕಾರಣಗಳೆಂದು ಗುರ್ತಿಸಿರುತ್ತದೆ. ಅಧ್ಯಯನದಲ್ಲಿ ಕೃಷಿ ಉತ್ಪಾದನೆ, ಪತ್ತು, ಮಾರಾಟ, ಪಶುಸಂಗೋಪನೆ, ಮೀನುಗಾರಿಕೆ, ಗ್ರಾಹಕ, ಗೃಹ ನಿರ್ಮಾಣ, ನಗರ ಪತ್ತು, ಕೈಗಾರಿಕೆ, ಆರೋಗ್ಯ, ಸಾರಿಗೆ, ವಿಮೆ, ಮಹಿಳಾ ಅಭಿವೃದ್ಧಿ, ಇತ್ಯಾದಿ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಸಹಕಾರ ಸಂಘಗಳ ಬೆಳವಣಿಗೆಯ ಅಂಶಗಳು ಸೇರಿರುತ್ತವೆ. ಜೊತೆಗೆ ಸಹಕಾರದ ಅಭಿವೃದ್ಧಿಗೆ ಪೂರಕವಾದ ಸಹಕಾರ ಶಿಕ್ಷಣ ಮತ್ತು ತರಬೇತಿ, ಕಾನೂನು, ಆಡಳಿತ, ಸಂಶೋಧನೆ ವ್ಯವಸ್ಥೆಗಳ ಬಗ್ಗೆಯೂ ಪರಿಶೀಲಿಸಿ ಶಿಫಾರಸ್ಸು ಮಾಡಿರುತ್ತದೆ.

ಸಮಿತಿಯು ಕೃಷಿ ಪತ್ತಿನ ಸಹಕಾರ ಸಂಘಗಳನ್ನು ವಿವಿದ್ಧೋದ್ದೇಶ ಸಹಕಾರ ಸಂಘಗಳನ್ನಾಗಿ ಸುಧಾರಣೆ ಮಾಡಬೇಕೆಂದು; ಪಶುಸಂಗೋಪನೆ, ಮೀನುಗಾರಿಕೆ, ಕುರಿ ಸಾಕಾಣಿಕೆ, ಕೈಗಾರಿಕೆ, ಸಂಸ್ಕರಣಾ, ಮುಂತಾದ ಕ್ಷೇತ್ರಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂದು ಸಲಹೆ ನೀಡಿದೆ. ಪ್ರಾಥಮಿಕ, ಪ್ರಾಂತೀಯ ಮತ್ತು ರಾಷ್ಟ್ರ ಮಟ್ಟದ – ಹೀಗೆ ಮೂರು ಹಂತದ ರಚನೆಯನ್ನು ಕೃಷಿ ಉತ್ಪನ್ನ ಮಾರಾಟ, ಪಟ್ಟಣ ಬ್ಯಾಂಕ್, ಮಹಿಳಾ ಸಂಘಗಳು, ಗ್ರಾಹಕ, ಗೃಹ ನಿರ್ಮಾಣ, ಇತ್ಯಾದಿ ಕ್ಷೇತ್ರಗಳಲ್ಲಿ ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದೆ. ಸಹಕಾರ ಇಲಾಖೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕೆಂದು, ರಾಷ್ಟ್ರವ್ಯಾಪಿ ಇಲಾಖೆಯ ಹುದ್ದೆಗಳನ್ನು ಏಕ ರೂಪದಲ್ಲಿ ಸೃಷ್ಟಿಸಬೇಕೆಂದು, ತರಬೇತಿ ನೀಡಬೇಕೆಂದು, ಇಲಾಖೆಯಿಂದ ಆಡಿಟ್ ಮಾಡಬೇಕೆಂದು, ಪ್ರಾಂತೀಯ ಭಾಷೆಗಳಲ್ಲಿ ಶಾಲೆಗಳ ಪಠ್ಯ ಪುಸ್ತಕಗಳಲ್ಲಿ ಸಹಕಾರದ ಬಗ್ಗೆ ಪಾಠ ಹಾಗೂ ಪದವಿಗಳಲ್ಲಿ ಸಹಕಾರದ ವಿಷಯವನ್ನು ಐಚ್ಛಿಕ ವಿಷಯವಾಗಿ ಸೇರಿಸಬೇಕೆಂದು, ಇತ್ಯಾದಿ ಶಿಫಾರಸ್ಸು ಮಾಡಿದೆ. ಪ್ರತಿಯೊಂದು ಪ್ರಾಂತದಲ್ಲಿ ಸಹಕಾರ ಶಿಕ್ಷಣ ಸಂಸ್ಥೆಯನ್ನು ಮತ್ತು "ಆಲ್ ಇಂಡಿಯಾ ಕೋ–ಅಪರೇಟಿವ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್ ಅಂಡ್ ರಿಸರ್ಚ್" ಅನ್ನು ಸ್ಥಾಪಿಸಬೇಕೆಂದು ಶಿಫಾರಸ್ಸು ಮಾಡಿದೆ. ಮತ್ತೊಂದು ಪ್ರಮುಖ ಅಂಶವೆಂದರೆ, ಪ್ರಥಮ ಬಾರಿಗೆ ಸಮಿತಿಯು ಗುರಿಯನ್ನು ನಿಗದಿಪಡಿಸಿ ಶಿಫಾರಸ್ಸು ಮಾಡಿದೆ. ಮುಂದಿನ 10 ವರ್ಷಗಳಲ್ಲಿ ಶೇ.50 ರಷ್ಟು ಹಳ್ಳಿಗಳನ್ನು ಶೇ.30 ರಷ್ಟು ಜನ ಸಂಖ್ಯೆಯನ್ನು ಸಹಕಾರ ವಲಯಕ್ಕೆ ತರಬೇಕೆಂದು ಮತ್ತು ಮಾರಾಟ ಮಾಡಬಹುದಾದ ಹೆಚ್ಚುವರಿ ಕೃಷಿ ಉತ್ಪಾದನೆಯಲ್ಲಿ ಶೇ.25 ರಷ್ಟನ್ನು ಸಹಕಾರ ಸಂಘಗಳ ಮೂಲಕ ಮಾಡಬೇಕೆಂದು ಹೇಳಿದೆ. ಸಹಕಾರಿ ಕಾಯಿದೆಯ ಬಗ್ಗೆ ಹಲವಾರು ತಿದ್ದುಪಡಿಗಳನ್ನು ಶಿಫಾರಸ್ಸು ಮಾಡಿರುತ್ತದೆ. ಒಟ್ಟಾರೆ ಸಹಕಾರ ಕ್ಷೇತ್ರದ ಬೆಳವಣಿಗೆಗೆ ಸಮಗ್ರ ಮತ್ತು ಮಹತ್ವದ ಶಿಫಾರಸ್ಸುಗಳನ್ನು ಮಾಡಿರುತ್ತದೆ.

(ಮುಂದುವರೆಯುವುದು...)

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಪ್ರಾಥಮಿಕ ಸಂಘ ಎಂದರೆ, ಸಹಕಾರ ಸಂಘ .................**

ಎ) ಬೇರೊಂದು ಸಹಕಾರ ಸಂಘಕ್ಕೆ ಸದಸ್ಯತ್ವದ ಅವಕಾಶವಿಲ್ಲದಿರುವುದು.

ಬಿ) ನಾಮಮಾತ್ರ ಸದಸ್ಯತ್ವ ಪಡೆಯಲು ಅವಕಾಶವಿರುವುದು

ಸಿ) ಇತರೆ ಸಹಕಾರ ಸಂಘಗಳು ಸದಸ್ಯತ್ವ ಪಡೆಯಲು ಅವಕಾಶವಿರುವುದು

ಡಿ) ಮೇಲಿನ ಯಾವುದೂ ಅಲ್ಲ

**2. ಸಹಕಾರ ಸಂಘಗಳಲ್ಲಿ ಸದಸ್ಯತ್ವ ಪಡೆಯಲು ನಿರ್ದಿಷ್ಟ ಪಡಿಸಿದ ವಯಸ್ಸು .....................**

ಎ) 21 ವರ್ಷಗಳು

ಬಿ) 25 ವರ್ಷಗಳು

ಸಿ) 18 ವರ್ಷಗಳು

ಡಿ) 20 ವರ್ಷಗಳು

**3. ಸಹಕಾರ ಸಂಘಗಳಿಗೆ ನೋಂದಣಿ ಪ್ರಮಾಣ ಪತ್ರವನ್ನು ಸಹಕಾರ ಸಂಘಗಳ ಕಾಯ್ದೆ 1959ರ ಕಲಂ ........... ರೀತ್ಯಾ ನೀಡಲಾಗುತ್ತದೆ.**

ಎ) ಕಲಂ 5

ಬಿ) ಕಲಂ 8

ಸಿ) ಕಲಂ 7

ಡಿ) ಕಲಂ 9

**4. ಸಹಕಾರ ಸಂಘಗಳ ಬೈಲಾ ತಿದ್ದುಪಡಿಯಲ್ಲಿ ಸಹಕಾರ ಸಂಘಗಳ ಕಾಯ್ದೆ 1959 ಕಲಂ ......................... ಕ್ಕೆ ಸಂಬಂಧಿಸಿರುತ್ತದೆ.**

ಎ) ಕಲಂ 11

ಬಿ) ಕಲಂ 11–ಎ

ಸಿ) ಕಲಂ 12

ಡಿ) ಕಲಂ 10

**5. ಸಹಕಾರ ಸಂಘಗಳ ವಿಲೀನತ, ಆಸ್ತಿಗಳ ಮತ್ತು ಹೊಣೆಗಳ ವರ್ಗಾವಣೆ ಮತ್ತು ವಿಭಜನೆ ಸದಸ್ಯರ .......................... ಬಹುಮತರಿಂದ ಅಂಗೀಕರಿಸಬೇಕಾಗಿದೆ.**

ಎ) 3/4 ರ ಬಹುಮತದಿಂದ

ಬಿ) 1/3 ರ ಬಹುಮತದಿಂದ

ಸಿ) 2/3 ರ ಬಹುಮತದಿಂದ

ಡಿ) 1/4 ರ ಬಹುಮತದಿಂದ

**6. ಸಹಕಾರ ಸಂಘಗಳಲ್ಲಿ ಸಾಮಾನ್ಯ ಸದಸ್ಯರ ಹಕ್ಕುಗಳು ..................**

ಎ) ಮತದಾನದ ಹಕ್ಕು

ಬಿ) ಸರ್ವಸದಸ್ಯರ ಸಭೆಗೆ ಹಾಜರಾಗುವುದು

ಸಿ) ಚುನಾವಣೆಗೆ ಸ್ಪರ್ಧಿಸುವುದು

ಡಿ) ಮೇಲಿನ ಎಲ್ಲವು

**7. ಸಹಕಾರ ಸಂಘಗಳಲ್ಲಿ ಸದಸ್ಯನ ಅನರ್ಹತೆಗಳು ....................**

ಎ) ತಾನು ದಿವಾಳಿ ಎಂದು ನ್ಯಾಯನಿರ್ಣಯ ಪಡೆಯಲು ಅರ್ಜಿ ಹಾಕಿಕೊಂಡಿದ್ದರೆ / ಪ್ರಮಾಣ ಪತ್ರ ಪಡೆದಿದ್ದರೆ

ಬಿ) ರಾಜಕೀಯ ಸ್ವರೂಪದ ಅಪರಾಧವಾಗಿರದ ಅಥವ ನೈತಿಕ ಅಧಃಪತನದ ಅಪರಾಧಕ್ಕಾಗಿ ಶಿಕ್ಷೆ ವಿಧಿಸಿದ್ದರೆ.

ಸಿ) ಅದೇ ಸಹಕಾರ ಸಂಘದ ನೌಕರ ಅಥವ ಹಣಕಾಸು ಸಂಸ್ಥೆಯ ನೌಕರನಾಗಿದ್ದರೆ.

ಡಿ) ಮೇಲಿನ ಎಲ್ಲವು

**8. ಸಹಕಾರ ಸಂಘದಲ್ಲಿ ಸದಸ್ಯನಾದವನು ........................ ಮತದಾನದ ಹಕ್ಕನ್ನು ಪಡೆದಿರುತ್ತಾನೆ.**

ಎ) ಒಬ್ಬ ಸದಸ್ಯ ಒಂದು ಮತ

ಬಿ) ಒಬ್ಬ ಸದಸ್ಯ ಒಂದಕ್ಕಿಂತ ಹೆಚ್ಚು ಮತ

ಸಿ) ಒಬ್ಬ ಸದಸ್ಯ ಷೇರಿಗೆ ಅನುಗುಣವಾಗಿ ಹಲವು ಮತ

ಡಿ) ಮೇಲಿನ ಎಲ್ಲವು

**9. ಸಹಕಾರ ಸಂಘಗಳ ಕಾಯ್ದೆಯ ಕಲಂ 70ರಡಿಯಲ್ಲಿ ದಾವೆಗಳನ್ನು ಇತ್ಯರ್ಥಪಡಿಸುವ ಅಧಿಕಾರ ......................... ಇವರಿಗೆ ಇರುತ್ತದೆ.**

ಎ) ರಾಜ್ಯ ಸರ್ಕಾರ

ಬಿ) ಕರ್ನಾಟಕ ಉಚ್ಚ ನ್ಯಾಯಾಲಯ

ಸಿ) ಸಹಕಾರ ಸಂಘಗಳ ನಿಬಂಧಕರು

ಡಿ) ಕರ್ನಾಟಕ ಮೇಲ್ಮನವಿ ಪ್ರಾಧಿಕಾರ

**10. ಸಹಕಾರ ಸಂಘಗಳ ಕಾಯ್ದೆ ರೀತ್ಯ ಸಂಘದ ನಿವ್ವಳ ಲಾಭವನ್ನು ಹಂಚಿಕೆ ಮಾಡುವ ಅಧಿಕಾರ ................. ದತ್ತವಾಗಿರುತ್ತದೆ.**

ಎ) ಆಡಳಿತ ಮಂಡಳಿ

ಬಿ) ಆಡಿಟ್ ಸಮಿತಿ

ಸಿ) ಸರ್ವಸದಸ್ಯರ ಸಭೆ

ಡಿ) ಕಾರ್ಯಕಾರಿ ಸಮಿತಿ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

**1 -D , 2 -C , 3 –C , 4 –C , 5 – C, 6 – B, 7 – B, 8 – B, 9 –D , 10 – B**